**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಸದಸ್ಯರು |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |


# ಬೃಹಚ್ಚರಣ

**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – 25,000/- |
| ಪೋಷಕರು | – 5,000/- |
| ಸದಸ್ಯತ್ವ | – 1,000/- |
| ವಾರ್ಷಿಕ ನಿರ್ವಹಣೆ | – 500/- |

ಸಂಪುಟ : 6 ಸಂಚಿಕೆ : 1 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್–ಜೂನ್ 2016


## ಅರ್ಪಣೆ



ಈ ಸಂಚಿಕೆಯನ್ನು
ನಮ್ಮ ಸಂಘದ ಸ್ಥಾಪಕ ಸದಸ್ಯ ಹಾಗೂ
ಪ್ರಥಮ ಲೆಕ್ಕಪತ್ರ ಪರಿಶೋಧಕ
**ನಾರಾಯಣಸ್ವಾಮಿ**
ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ
ಅರ್ಪಿಸಲಾಗಿದೆ

## 2015–16ರ ಸರ್ವ ಸದಸ್ಯರ ಸಭೆ ವಿಶೇಷಾಂಕ



## ಸಂಪಾದಕೀಯ

ಆತ್ಮೀಯರೇ, ನಮಸ್ಕಾರ

ತಮ್ಮ ಲೇಖನಗಳು ಒಂದು ಪುಟಕ್ಕೆ ಮೀರದಂತಿರಲಿ ಎಂಬ ನಮ್ರ ವಿನಂತಿ. ತಮ್ಮ ಸಹಕಾರ ಹೀಗೇ ಮುಂದುವರೆಯಲೆಂದು ಆಶಿಸುತ್ತೇನೆ.

ತಮ್ಮೆಲ್ಲರಿಗೂ ಸಂಘದ ಸರ್ವ ಸದಸ್ಯರ ಸಭೆಯ ವಿವರಗಳು ತಿಳಿಸಬೇಕೆಂಬ ಆಕಾಂಕ್ಷೆಯೇ ಎಲ್ಲರ ಮೆಚ್ಚಿನ 'ಬೃಹಚ್ಚರಣ' ಸ್ವಲ್ಪ ವಿಳಂಬವಾಗಿರುವುದಕ್ಕೆ ಕಾರಣ.

ನಿಮ್ಮವ



■ ಕೆ.ಸಿ.ನಟರಾಜನ್
ಸಂಪಾದಕ, 9845113475

## ಅಧ್ಯಕ್ಷರ ನುಡಿ

ಬೃಹಚ್ಚರಣ ಬಂಧುಗಳಿಗೆ ನಮಸ್ಕಾರ.

ಮುಂಬರುವ ಶ್ರಾವಣ, ಭಾದ್ರಪದ ಮಾಸದಲ್ಲಿ ಬರುವ ಎಲ್ಲಾ ಹಬ್ಬಗಳಿಗೂ ನಿಮಗೆ ಶುಭವಾಗಲೆಂದು ಹಾರೈಸುತ್ತೇನೆ.

2015–16ರ ಸರ್ವ ಸದಸ್ಯರ ಸಭೆಯು ಸುಗಮವಾಗಿ ನಡೆದಿರುವುದಕ್ಕೆ ತಮ್ಮೆಲ್ಲರ ಸಹಕಾರವೇ ಕಾರಣ. ನಮ್ಮ ಚಟುವಟಿಕೆಗಳನ್ನು ತಾವೆಲ್ಲಾ ಮೆಚ್ಚಿ ಆಯ ವ್ಯಯ ಲೆಕ್ಕಪತ್ರಗಳನ್ನು ಸರ್ವಾನುಮತದಿಂದ ಅಂಗೀಕರಿಸಿರುವುದೇ ಇದಕ್ಕೆ ಸಾಕ್ಷಿ. ಸಂಘವು ಸ್ಥಾಪಿಸಿರುವ 'ವಿದ್ಯಾನಿಧಿ'ಗೆ ಸಭೆಯಲ್ಲೇ ಸ್ವ–ಇಚ್ಛೆಯಿಂದ ಹಲವಾರು ಸದಸ್ಯರು ದಾನಿಗಳಾಗಿರುವುದು ಸಂತಸ. ಅಟ್ಟೂರು ಶ್ರೀ ರಾಮಕೃಷ್ಣ ಶರ್ಮ ಕುಟುಂಬದ ಸದಸ್ಯರು ಸ್ಥಳದಲೇ ಐವತ್ತು ಸಾವಿರ ರೂಗಳನ್ನು ದೇಣಿಗೆ ನೀಡಿರುವುದಕ್ಕೆ ಸಂಘವು ಕೃತಜ್ಞತೆ ಸಲ್ಲಿಸುತ್ತದೆ. ವಿದೇಶದಲ್ಲಿರುವ ಸಮುದಾಯದ ಕುಟುಂಬದ ಸದಸ್ಯರು ಸಂಘದ ಕಾರ್ಯ ಚಟುವಟಿಕೆಗಳಿಗೆ ದೇಣಿಗೆಗಳನ್ನು ನೀಡಬೇಕೆಂದು ಮನವಿ. ಸಭೆಯಲ್ಲಿ ಸದಸ್ಯರು ನೀಡಿರುವ ಸಲಹೆ, ಸೂಚನೆಗಳನ್ನು ಕಾರ್ಯಕಾರಿ ಸಮಿತಿಯು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಿದೆ. ಸಂಘವು ಒಂದು ದಿನದ ಸಾಂಸ್ಕೃತಿಕ ಪ್ರವಾಸ ಏರ್ಪಡಿಸಲಿದೆ. ತಮ್ಮ ಸೂಚನೆಯಂತೆ ಸೆಪ್ಟೆಂಬರ್ 11, ಭಾನುವಾರ 'ಗುರುವಂದನಾ ಕಾರ್ಯಕ್ರಮ'ವನ್ನು ಹಮ್ಮಿಕೊಂಡು ನಮ್ಮ ಸಮುದಾಯದ ನಿವೃತ್ತ ಶಿಕ್ಷಕರನ್ನು ಗೌರವಿಸಬೇಕೆಂದು ನಿರ್ಧರಿಸಲಾಗಿದೆ.

ತಮ್ಮೆಲ್ಲರ ಪ್ರೋತ್ಸಾಹ ಮತ್ತು ಸಹಕಾರ ಇದೇ ರೀತಿ ಮುಂದುವರೆಯಲೆಂದು ಆಶಿಸುತ್ತೇನೆ.



**ತಮ್ಮವ,**

■ ಎಸ್. ಸೋಮಸುಂದರ



ಹರಿಹರಪುರದ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳು ಬೃಹಚ್ಚರಣ ಪತ್ರಿಕೆಯನ್ನು ವೀಕ್ಷಿಸುತ್ತಿರುವುದು

## ಅಭಿನಂದನೆ

**ಶ್ರೀ ಅಟ್ಟೂರು ರಾಮಕೃಷ್ಣ ಶರ್ಮಾ ಮತ್ತು ಕುಟುಂಬ**ದ ಸದಸ್ಯರು 50,000/– ರೂಪಾಯಿಗಳನ್ನು ಹಾಗೂ **ಶ್ರೀ ಬಿ.ಎಸ್. ಕೃಷ್ಣಮೂರ್ತಿ ಮತ್ತು ಕುಟುಂಬ**ದ ಸದಸ್ಯರು 40,000/– ರೂಪಾಯಿಗಳನ್ನು ವಿದ್ಯಾನಿಧಿಗೆ ದೇಣಿಗೆ ನೀಡಿರುತ್ತಾರೆ. ಇವರ ಕುಟುಂಬಕ್ಕೆ ಸಂಘವು **ಶುಭಹಾರೈಸುತ್ತದೆ.**

## ಮೈ.ಮಂ.ದ್ರಾ.ಬ್ರ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

**ಕಾರ್ಯಕಾರಿ ಸಮಿತಿ : 2015–2018**

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 99001 13298** |
| ಉಪಾಧ್ಯಕ್ಷರು | : | **ಎಚ್.ಕೆ. ಶಶಿಧರ್, 98451 73766** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 98450 55582** |
| ಸಹಕಾರ್ಯದರ್ಶಿ | : | **ಅರುಣ್ ವಿ., 98801 66001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 99809 45699** |
| ಲೆಕ್ಕಪರಿಶೋಧಕರು | : | **ಎಸ್.ಸಿ. ಶ್ರೀನಿವಾಸ, 98453 76949** |
| ಗೌರವ ಸದಸ್ಯರು | : | **ಮಂಜುನಾರಾಯಣ್ ಕೆ. 98861 14279** |
| | | **ಟಿ.ಎಸ್. ಮಣಿ, 98451 76335** |
| | | **ಟಿ.ಎಸ್. ರಮೇಶ್, 96638 74531** |
| | | **ಟಿ.ಪಿ. ಸೂರ್ಯ ನಾರಾಯಣ, 99454 84268** |
| | | **ಸರಸ್ವತಿ ನಟರಾಜನ್, 94806 19730** |
| | | **ಕೆ. ಜಿ. ವೆಂಕಟೇಶ್, 99640 12687** |
| | | **ಆರ್. ಗಣೇಶ ಶ್ರೀಧರ್, 9880187686** |
| | | **ಟಿ. ನಾಗೇಶ್, 99806 62118** |
| | | **ಬಿ.ಎನ್.ಜಿ. ಪ್ರಸಾದ್, 9845128229** |
| | | **ಸುಬ್ರಹ್ಮಣ್ಯಂ ಬೆಂಗಳೂರು, 94498 69667** |
| | | **ಕೆ.ಬಿ.ಎಸ್. ಶರ್ಮಾ, 94820 87344** |
| | | **ಅನಂತ ಕೆ.ಎಸ್. 97404 44222** |
| | | **ಶಂಕರ ಪ್ರಸಾದ್ ಬಿ.ಆರ್. 98456 63833** |

## ಗಣ್ಯರೊಂದಿಗೆ...



ಶ್ರೀ ಜಯಚಾಮರಾಜೇಂದ್ರ ಒಡೆಯರ್‌ಅವರೊಡನೆ ಸ್ಥಾಪನ ಸದಸ್ಯ ಶ್ರೀಕಂಠೇಶ್ವರ ಅಯ್ಯರ್



ದಿವಾನ್ ಸರ್. ಮಿರ್ಜಾ ಇಸ್ಮಾಯಿಲ್ ಅವರೊಂದಿಗೆ ಸ್ಥಾಪಕ ಸದಸ್ಯ ಟಿ.ಎಸ್. ಸೂರ್ಯನಾರಾಯಣ್ (ಎಡತುದಿ)

## ಅರ್ಪಣೆ

ನಮ್ಮ ಸಂಘದ ಸ್ಥಾಪಕ ಸದಸ್ಯ ಹಾಗೂ ಪ್ರಥಮ ಲೆಕ್ಕ ಪರಿಶೋಧಕರಾಗಿ ಕಾರ್ಯನಿರ್ವಹಿಸಿರುವ ಶ್ರೀ ನಾರಾಯಣ ಸ್ವಾಮಿಯವರಿಗೆ ಈ ಸಂಚಿಕೆ ಅರ್ಪಣೆ. ಶ್ರೀ ವೆಂಕಟಗಿರಿಯಪ್ಪ ಶ್ರೀಮತಿ ಗೌರಮ್ಮ ನವರ ಪುತ್ರ ನಾರಾಯಣ ಸ್ವಾಮಿಯವರ ಜನನ 1.1.1936ರಲ್ಲಿ. ಪತ್ನಿ ಶ್ರೀಮತಿ ರಾಜಮ್ಮನವರು ಸಂಘದ ಸ್ಥಾಪಕ ಅಧ್ಯಕ್ಷರಾದ ಶ್ರೀ ಶ್ರೀಕಂಠೇಶ್ವರ ಅಯ್ಯರ್‌ರವರ ಪುತ್ರಿ. ಕರ್ನಾಟಕ ಸರ್ಕಾರದ ಲೆಕ್ಕ ಪರಿಶೋಧನಾ ಇಲಾಖೆಯಲ್ಲಿ ಉಪನಿರ್ದೇಶಕರಾಗಿ ಸೇವೆ ಸಲ್ಲಿಸಿ, ನಿವೃತ್ತಿ.

ಹವ್ಯಾಸವಾಗಿ ಸಣ್ಣ ಕಥೆಗಳು, ಚುಟುಕುಗಳು ಹಾಗೂ ವ್ಯಂಗ್ಯಚಿತ್ರಗಳನ್ನು ರಚಿಸುತ್ತಿದ್ದು, ಸಮಾಜದ ಹಲವಾರು ಸಾಂಸ್ಕೃತಿ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಕಾರ್ಯಪ್ರವೃತ್ತರಾಗಿ, ಜಿಲ್ಲಾ ಹಾಗೂ ರಾಜ್ಯ ಮಟ್ಟದ ಕವಿ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದು, ತಮ್ಮ ಚುಟುಕುಗಳ ಸಂಕಲನವೊಂದನ್ನು ಲೋಕಾರ್ಪಣೆ ಮಾಡಿದ್ದಾರೆ. ತಮ್ಮ ಬಳಿಯಿದ್ದ ಸಾವಿರಾರು ವಾಣಿಜ್ಯ ಪುಸ್ತಕಗಳನ್ನು ಉಚಿತವಾಗಿ ವಾಚನಾಲಯಗಳಿಗೆ ನೀಡಿರುತ್ತಾರಲ್ಲದೆ ಯುವ ಬರೆಹಗಾರರಿಗೆ ಉತ್ತೇಜಿಸಿ ಅರ್ಹರಿಗೆ ಧನ ಸಹಾಯವನ್ನೂ ನೀಡುರುವುದು ಸ್ಮರಣೀಯ. ದಿನಾಂಕ 22.10.2012ರಂದು ನಮ್ಮನ್ನಗಲಿದರೂ ಅವರ ಸೇವೆಯನ್ನು ಸಂಘವು ಎಂದೆಂದೂ ಸ್ಮರಿಸುತ್ತದೆ. ಅವರ ಕುಟುಂಬಕ್ಕೆ ಶುಭವಾಗಲಿ. ಶ್ರೀಯುತರ ಕುಟುಂಬದ ಸದಸ್ಯರು ನಮ್ಮ ಸಂಘದ ಸದಸ್ಯರಾಗಿರುವುದಕ್ಕೆ ಸಂತೋಷ.

–ಸಂ

## ಸಂಘದಿಂದ 'ಗುರುವಂದನ' ಕಾರ್ಯಕ್ರಮ

**ನಮ್ಮ ಸಮುದಾಯದ ನಿವೃತ್ತಿ ಹೊಂದಿರುವ ಶಿಕ್ಷಕ, ಶಿಕ್ಷಕಿಯರಿಗೆ ಸಂಘದ ವತಿಯಿಂದ ಗೌರವ ಸನ್ಮಾನ ಮಾಡುವ ಬಗ್ಗೆ ಈ ವರ್ಷದ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಿ ಅನುಮೋದಿಸಿಲಾಗಿದೆ.**

**ಅದರಂತೆ, ತಾ. 11.09.2016ರಂದು ಈ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿರುವುದರಿಂದ, ಸಮುದಾಯದ ನಿವೃತ್ತಿ ಹೊಂದಿರುವ 'ಗುರುಗಳು' ತಮ್ಮ ಕಿರು ಪರಿಚಯ ಹಾಗೂ ಭಾವಚಿತ್ರದೊಂದಿಗೆ ಆಗಸ್ಟ್ 15ರೊಳಗೆ ಸಂಘದ ಕಾರ್ಯಕಾರಿಣಿ ಸಮಿತಿಯ ಸದಸ್ಯರನ್ನು ಸಂಪರ್ಕಿಸಿ, ವಿವರಗಳನ್ನು ತಲುಪಿಸಲು ವಿನಂತಿ.**

**–ಕಾರ್ಯದರ್ಶಿ**

## ಗೃಹಪ್ರವೇಶ

ನಮ್ಮ ಸಂಘದ ಸದಸ್ಯ ಶ್ರೀ ರವಿಕಿರಣ್‌ರವರು ರಾಜರಾಜೇಶ್ವರಿ ನಗರದಲ್ಲಿ ಹೊಸದಾಗಿ ಕಟ್ಟಿರುವ 'ಮಡಿಲು' ಗೃಹಪ್ರವೇಶವನ್ನು ತಾ. 24.04.2016ರಂದು ನೆರವೇರಿಸಿದರು.

## ಷಷ್ಠಿಪೂರ್ತಿ ಶಾಂತಿ

ನಮ್ಮ ಸಂಘದ ಸದಸ್ಯ ಶ್ರೀ ಎನ್.ವಿ. ಸೂರ್ಯಪ್ರಕಾಶ್‌ರವರ ಷಷ್ಠಿಪೂರ್ತಿ ಶಾಂತಿ ಮಹೋತ್ಸವವು ದಿನಾಂಕ 19.5.2016ರಂದು ನೆರವೇರಿತು. ಸಂಘವು ಶ್ರೀಯುತರುಗಳ ಕುಟುಂಬಕ್ಕೆ ಶುಭ ಹಾರೈಸುತ್ತದೆ.

# 2015–16ರ ಸರ್ವ ಸದಸ್ಯರ ಸಭೆಯ ಛಾಯಾಚಿತ್ರಗಳು

ಕೃಪೆ : ಶಿವಕುಮಾರ್ ಎನ್.




ಪ್ರಾರ್ಥನೆಯಿಂದ ಸಭೆ ಪ್ರಾರಂಭ



ನಮ್ಮನ್ನಗಲಿದವರಿಗೆ ಶ್ರದ್ಧಾಂಜಲಿ



ಆಯ–ವ್ಯಯ ಅನುಮೋದನೆ




ಅಧ್ಯಕ್ಷರ ಭಾಷಣ

## ಗೌರವಿಸಲ್ಪಟ್ಟ 'ಹಿರಿಯ ಚೇತನ'ರು

*ಶ್ರೀಯುತರಾದ*

ಕೆ.ಎಸ್. ಛಾಯಾಪತಿ
ಎಸ್.ಎನ್. ಕೃಷ್ಣಮೂರ್ತಿ
ಬಿ.ವಿ. ಶೇಷಾದ್ರಿ
ಡಿ. ಸತ್ಯಮೂರ್ತಿ
ಎಸ್.ಆರ್. ಸುಬ್ಬಲಕ್ಷ್ಮಿ
ಎಸ್.ವಿ. ನಾರಾಯಣಮೂರ್ತಿ
ಜಿ.ಎಸ್. ಸತ್ಯಮೂರ್ತಿ
ಆರ್.ಎಸ್. ರಾಜಗೋಪಾಲ್
ಆರ್.ಎನ್. ವೆಂಕಟಸುಬ್ಬರಾವ್
ಸರಸ್ವತೀ ನಾಗಭೂಷಣ್
ಎಚ್.ಡಿ. ಶ್ರೀನಿವಾಸ್



ಹಿರಿಯ ಚೇತನರಿಗೆ ಗೌರವ ಸಮರ್ಪಣೆ





# 2015–16ರ ಸರ್ವ ಸದಸ್ಯರ ಸಭೆಯ ಪಕ್ಷಿನೋಟ



ಪ್ರಾಸ್ತಾವಿಕ ನುಡಿ

ದಿನಾಂಕ 10.7.2016ರಂದು ಬಸವನಗುಡಿಯ ಕುಕ್ಕೆ ಸುಬ್ರಹ್ಮಣ್ಯ ಮಠದ ಸಭಾಂಗಣದಲ್ಲಿ ಶ್ರೀ ಬಿ.ಎನ್.ಜಿ. ಪ್ರಸಾದ್‌ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಗಿ, ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಅನಂತ್‌ರವರು ಸಭೆಯನ್ನು ಡಿ.ವಿ.ಜಿ.ಯವರ ಕಗ್ಗದೊಂದಿಗೆ ಸ್ವಾಗತಿಸಿದರು.

ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಟಿ.ಎಸ್. ರಮೇಶನ್‌ರವರು ನಮ್ಮಮ್ಮಗಲಿದ ನಮ್ಮವರ ಹೆಸರುಗಳನ್ನು ಓದಿ ಗೌರವಪೂರ್ವಕ ಒಂದು ನಿಮಿಷದ ಮೌನ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಸಂಘದ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿಯವರು ಸಂಘದ ಕಳೆದ ಸಾಲಿನ ಕಾರ್ಯ ಚಟುವಟಿಕೆಗಳು, ಕೈಗೊಂಡ ಕಾರ್ಯಕ್ರಮಗಳು, ಮುಂದೆ ಮಾಡಬೇಕಾಗಿರುವ ಚಟುವಟಿಕೆಗಳ ಬಗ್ಗೆ ಪ್ರಾಸ್ತಾವಿಕ ನುಡಿಯಲ್ಲಿ ವಿವರಿಸಿದರು. ಅಂತೆಯೇ ಸಂಘವು ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ 'ವಿದ್ಯಾನಿಧಿ'ಗಾಗಿ ಪ್ರತ್ಯೇಕವಾಗಿ ತೆರೆದಿರುವ ಬ್ಯಾಂಕ್ ಖಾತೆಯ ವಿವರಗಳನ್ನು ನೀಡಿ, ಸದಸ್ಯರೆಲ್ಲಾ ದಾನಿಗಳಾಗಬೇಕೆಂದು ವಿನಂತಿಸಿದರು.



ಆಯ–ವ್ಯಯ ಅನುಮೋದನೆ

ಹಿಂದಿನ ವರ್ಷದ ಆಯ–ವ್ಯಯ ಲೆಕ್ಕವನ್ನು ಖಜಾಂಚಿ ಶ್ರೀ ಸತ್ಯ ನಾರಾಯಣ್‌ರವರು ಮಂಡಿಸಿದ್ದು, ಸರ್ವಾನುಮತದಿಂದ ಸರ್ವ ಸದಸ್ಯರೂ ಕೈ ಎತ್ತುವ ಮೂಲಕ ಅನುಮೋದಿಸಿ, ದೃಢೀಕರಿಸಿದರು. ಲೆಕ್ಕ ಪತ್ರ ಪರಿಶೋಧಕರು ಹಾಗೂ ಸಂಘದ ಸದಸ್ಯರಾದ ಶ್ರೀ ಬಿ.ಎನ್.ಜಿ. ಕುಮಾರ್ ರವರು ಪ್ರತೀ ವರ್ಷದಂತೆ ಈ ಬಾರಿಯೂ ಉಚಿತವಾಗಿ ಲೆಕ್ಕ ಪತ್ರಗಳನ್ನು ಪರಿಶೋಧನೆಯ ಸೇವೆ ನೀಡುತ್ತಿರುವುದಕ್ಕೆ ಸಭೆ ಅಭಿನಂದಿಸಿತು.

ಸಂಘದ ಅಧ್ಯಕ್ಷರಾದ ಶ್ರೀ ಸೋಮಸುಂದರ್‌ರವರು ಅಧ್ಯಕ್ಷ ಭಾಷಣದಲ್ಲಿ 'ವಿದ್ಯಾನಿಧಿ'ಯ ಬಗ್ಗೆ ವಿವರವಾದ ವಿವರಣೆಯನ್ನು ನೀಡಿದರು. ಸರ್ವ ಸದಸ್ಯರ ಸಲಹೆಯಂತೆ ಸೆಪ್ಟೆಂಬರ್ 11, 2016ರ ಭಾನುವಾರದಂದು ನಿವೃತ್ತ ಶಿಕ್ಷಕರನ್ನು ಗೌರವಿಸುವ 'ಗುರುವಂದನಾ' ಕಾರ್ಯಕ್ರಮದ ಸಲುವಾಗಿ ವಿವರಗಳನ್ನು ಸಂಗ್ರಹಿಸಿ ಕೊಡಬೇಕೆಂದು ಸದಸ್ಯರಲ್ಲಿ ಮನವಿ ಮಾಡಿದರು.



ಮುಂದಿನ ದಿನಗಳಲ್ಲಿ ಸೇನೆ, ಪೊಲೀಸ್, ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿದವರನ್ನೂ, ನಿವೃತ್ತ ಶ್ಯಾನುಭೋಗರನ್ನೂ ಗೌರವಿಸಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದರು.

75 ವರ್ಷ ತುಂಬಿದ ಸಮುದಾಯದ ಹಿರಿಯರನ್ನು ಕಾರ್ಯಕಾರಿ ಸಮಿತಿ ಸದಸ್ಯ ಬೆಂಗಳೂರು ಸುಬ್ರಹ್ಮಣ್ಯಂರವರು ಪರಿಚಯಿಸಿದ್ದು, ಹಿರಿಯ ಸದಸ್ಯರಾದ ಎಂ.ಪಿ. ರಂಗನಾಥ್, ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಸರಸ್ವತಿ ನಟರಾಜನ್ ಹಾಗೂ ಹಿರಿಯ ಸದಸ್ಯ ಶ್ರೀ ಆರ್.ಸಿ. ಚಂದ್ರಮೌಳಿಯವರು ಸಂಘದ ಪರವಾಗಿ ಗೌರವಿಸಿದರು. ಪ್ರೌಢಶಾಲೆ, ಪದವಿ ಪೂರ್ವ, ಪದವಿ, ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಅಧಿಕ ಅಂಕ ಪಡೆದ ಪ್ರತಿಭಾ ವಿದ್ಯಾರ್ಥಿಗಳನ್ನು ಸಂಘದ ಶ್ರೀಮತಿ ಸರಸ್ವತಿ ನಟರಾಜನ್‌ರವರು ಪರಿಚಯಿಸಿದರು. ಹಿರಿಯ ಸದಸ್ಯರಾದ ಶ್ರೀಯುತ ರವಿಶಂಕರ್, ಶ್ರೀಮತಿ ಇಂದಿರಾ, ಶ್ರೀನಿವಾಸಮೂರ್ತಿ, ನಾಗರಾಜ್, ರಮೇಶ್, ಸಂಘದ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳು ಪುರಸ್ಕರಿಸಿದರು.

ವಂದನಾರ್ಪಣೆ ಹಾಗೂ ಕಾರ್ಯಕ್ರಮ ನಿರೂಪಣೆಯನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ಎಚ್.ಕೆ. ಶಶಿಧರ್‌ರವರು ಅಚ್ಚುಕಟ್ಟಾಗಿ ನೆರವೇರಿಸಿದರು.



ಅನಿಸಿಕೆಗಳನ್ನು ತಿಳಿಸುತ್ತಿರುವ ಸದಸ್ಯರು

# ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳು

















ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು




1973ರ ಜೂನ್ 5ನ್ನು ವಿಶ್ವಸಂಸ್ಥೆಯು ವಿಶ್ವ ಪರಿಸರ ದಿನ ಎಂದು ಘೋಷಿಸಿತು. ಅಂದಿನಿಂದ ಇಂದಿನವರೆಗೂ ಪ್ರಪಂಚದ ಪ್ರತಿ ರಾಷ್ಟ್ರವೂ ಪ್ರತಿವರ್ಷ ಜೂನ್ 5ನ್ನು ವಿಶ್ವ ಪರಿಸರ ದಿನ ಎಂದು ಆಚರಿಸುತ್ತಾ ಬಂದಿದೆ. ಈ ದಿನದ ಮುಖ್ಯ ಉದ್ದೇಶವೇನೆಂದರೆ, ಪರಿಸರ, ಪರಿಸರ ಸಂರಕ್ಷಣೆ, ಪರಿಸರ ಮಾಲಿನ್ಯ ಮತ್ತು ಮಾಲಿನ್ಯವನ್ನು ತಡೆಗಟ್ಟುವುದರ ಬಗ್ಗೆ ಸಾಮಾನ್ಯ ಜನರಿಗೂ ತಿಳುವಳಿಕೆ ಬರುವಂತೆ ಮಾಡುವುದಾಗಿದೆ. ಅಂದಿನ ದಿನ ಪ್ರಪಂಚದಾದ್ಯಂತ ನಾಗರೀಕರು ಪರಿಸರ ಉಳಿಸುವ ಬಗ್ಗೆ ಪಣತೊಡುತ್ತಾರೆ.

ನಮ್ಮ ಪ್ರಧಾನಿ ನರೇಂದ್ರ ಮೋದಿಯವರು 2015ರ ಜೂನ್ 5ರಂದು ಅವರ ಮನೆ ಅಂಗಳದಲ್ಲಿ ಒಂದು ಗಿಡ ನೆಟ್ಟು ಆ ಗಿಡವನ್ನು ಮರವಾಗಿ ಬೆಳೆಸುವ ಆಶಾಭಾವನೆ ಹೊಂದಿದ್ದಾರೆ.

ನಮ್ಮ ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರು ಪರಿಸರದ ಕಾಳಜಿಯಿಂದ ಗಿಡ ನೆಡುವ ಕಾರ್ಯಕ್ರಮವನ್ನು ಜನರಲ್ಲಿ ಮೂಡುವಂತೆ ಮಾಡಿದರು. ಪರಿಸರ, ಸಾಲುಮರ ಇವುಗಳನ್ನು ನೆನೆದಾಗ ಹಿರಿಯರಾದ ಸಾಲುಮರದ ತಿಮ್ಮಕ್ಕನನ್ನು ಮರೆಯುವಂತಿಲ್ಲ. ತನಗೆ ತಿನ್ನಲು ಆಹಾರ ಇಲ್ಲದ ಸಮಯದಲ್ಲೂ ಪರಿಸರ ಮತ್ತು ಮುಂದಿನ ಜನಾಂಗಕ್ಕಾಗಿ ಸಾಲುಮರವನ್ನು ಸಲಹಿದ್ದಾರೆ. ಇದು ಈಗಿನ ಸಮಾಚಾರ ವಾದರೆ, ಮೈಸೂರು ಸಂಸ್ಥಾನ ಇದ್ದಾಗ ರಾಜನಾಗಿದ್ದ ಹೈದರಾಲಿ, ಟಿಪ್ಪು ಸುಲ್ತಾನರು ಬೆಂಗಳೂರಿನ ಮಧ್ಯಭಾಗದಲ್ಲಿ ವಿಶಾಲವಾದ ಸ್ಥಳದಲ್ಲಿ ಗಿಡ ಗಳನ್ನು ನೆಡಿಸಿ ಅದು ಇಂದು ಸಾವಿರಾರು ಮರಗಳಾಗಿರುವ ಜಾಗವೇ ಲಾಲ್‌ಬಾಗ್. ಇಂದಿಗೂ ಇದು ಪರಿಸರ ಮತ್ತು ಅದರ ಸಂರಕ್ಷಣೆಗೆ ಸಾಕ್ಷಿಯಾಗಿ ನಿಂತಿದೆ.

ಪ್ರತಿವರ್ಷವೂ ಈ ದಿನದಂದು ಹಲವಾರು ಸಂಘಟನೆಗಳು ಸಂಸ್ಥೆಗಳು ಗಿಡ ನೆಟ್ಟು ಪರಿಸರ ರಕ್ಷಿಸಿ, ಮಾಲಿನ್ಯ ತಡೆಗಟ್ಟುವ ಪಣ ತೊಡುತ್ತಾರೆ. ವಿಶ್ವಸಂಸ್ಥೆಯು ಪ್ರತೀ ವರ್ಷ ಒಂದು ಘೋಷಣೆ ಹೊರಡಿಸಿ ಆ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸೂಚಿಸಿದೆ. ಇದರಂತೆ 2016ರಲ್ಲಿ 'ಕಾಡಿನಲ್ಲಿ ನಡೆಯುವ ಕಾನೂನುಬಾಹಿರ ಚಟುವಟಿಕೆಯನ್ನು ವಿರೋಧಿಸುವ ಬಗ್ಗೆಯೂ ಮತ್ತು ಪರಿಸರ ಸಂರಕ್ಷಣೆಗಾಗಿ ಕೇಂದ್ರ ಸರ್ಕಾರದ ಬಿಗಿ ಕಾಯಿದೆ ಕಾನೂನುಗಳಿವೆ. ನಾನೂ ಈ ವಿಷಯದಲ್ಲಿ ಆಸಕ್ತಿ ಇರುವವನಾದ್ದರಿಂದ ಮತ್ತು ಭಾರತ ಮಾತೆಯ ಮಡಿಲಲ್ಲಿ ಜನಿಸಿರುವುದಾದ್ದರಿಂದ ಪ್ರತೀ ವರ್ಷ ಗಿಡ ನೆಡುತ್ತಾ ಬಂದಿದ್ದೇನೆ ಮತ್ತು ಪ್ಲಾಸ್ಟಿಕ್ ಬಳಸುವುದನ್ನು ನಿಲ್ಲಿಸಿದ್ದೇನೆ. ಈ ಒಂದು ಬರವಣಿಗೆಯ ಮೂಲಕ ನನ್ನದೊಂದು ಸಣ್ಣ ಕೋರಿಕೆ. ನೀವೂ ಕೂಡ ಗಿಡಗಳನ್ನು ನೆಟ್ಟು ಅದರ ಪಾಲನೆಯನ್ನು ಮಾಡಿ. ಇದು ನೀವು ಪರಿಸರಕ್ಕೆ ಕೊಡುವ ಒಂದು ಕೊಡುಗೆ ಮತ್ತು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ.



ಬಿನ್ನಹದೊಂದಿಗೆ
✍ **ಅರ್ಜುನ್ ದೇಶಪಾಂಡೆ**

# ಕಸ ರಸ ಕೈ ಜೋಡಣೆ

ಪ್ರಕೃತಿಯ ಬೇರು ನಾರು ಎಲೆ ಎಲ್ಲವೂ ಕಸ,
ಅದರಿಂದ ಬಂದ ಕಾಯಿ ಹಣ್ಣು ಹಂಪಲು ರಸ॥

ಜೀವನ ಬೇಜಾರು ಅತೃಪ್ತಿಯೇ ಕಸ,
ಜೀವನ ಸಮರ ಗೆದ್ದ ಸಂತೃಪ್ತಿಯೇ ರಸ ॥

ಸೋಮಾರಿತನದಿಂದ ಕಾಲ ಕಳೆಯುವುದೇ ಕಸ,
ಕಾಲದ ಮಹಿಮೆ ಕಂಡ ಕ್ರಿಯಾಶೀಲತ್ವವೇ ರಸ॥

ಚಂಚಲ ಅನಾಸಕ್ತಿ ಬುದ್ಧಿಯೇ ಕಸ
ಅಚಲ ಪ್ರತಿಭೆ ಸ್ವಬುದ್ಧಿಯೇ ರಸ॥

ದುಃಖವನ್ನು ಇತರರಿಗೆ ಕೊಡುವುದೇ ಕಸ।
ಇತರರ ಸುಖವನ್ನು ಬಯಸುವುದೇ ರಸ ॥

ಪರಧರ್ಮಗಳನ್ನು ತೆಗಳುವುದೇ ಕಸ
ಎಲ್ಲಾ ಧರ್ಮಗಳನ್ನು ಪ್ರೀತಿಸುವುದೇ ರಸ ॥

ಇತರರಿಗೆ ಕೆಡಕು ಬಯಸುವುದೇ ಕಸ,
ಎಲ್ಲರಿಗೂ ಸಹಾಯ ಮಾಡುವುದೇ ರಸ ॥

ಎಲ್ಲರೊಡನೆ ಕೋಪವನ್ನು ತೋರ್ಪಡಿಸುವುದೇ ಕಸ
ಶಾಂತಿ, ಸೌಹಾರ್ದವನ್ನು ಅಳವಡಿಸುವುದೆ ರಸ ॥

ಭಯ, ಭೀತಿ ಎಂದು ಸುಮ್ಮನಿರುವುದು ಕಸ
ಧೈರ್ಯದಿಂದ ಎಲ್ಲವನ್ನೂ ಎದುರಿಸುವುದೇ ರಸ ॥

ವಿದ್ಯೆಯಿಲ್ಲದೇ ಎಲ್ಲರನ್ನೂ ದ್ವೇಷಿಸುವುದೇ ಕಸ,
ವಿದ್ಯಾವಂತರಾಗಿ ಎಲ್ಲರೊಡನೆ ವ್ಯವಹರಿಸುವುದೇ ರಸ ॥

ಅವಿವೇಕದಿಂದ ಏನನ್ನೂ ಸಾಧಿಸದಿದ್ದರೆ ಅದು ಕಸ,
ವಿವೇಕಿಗಳು ಮೇಧಾವಿಗಳಾಗಿದ್ದರೆ ಅದೇ ರಸ ॥

ಧನವಂತರಾಗಿ ಎಲ್ಲರೊಡನೆ ಹಂಚಿಕೊಳ್ಳದಿದ್ದರೆ ಅದೇ ಕಸ
ಹಣವನ್ನು ಸಂಪಾದಿಸಿ ಎಲ್ಲರಿಗೂ ಉಪಯೋಗವಾದರೆ ಅದೇ ರಸ

ದೊಡ್ಡವರನ್ನು ಚಿಕ್ಕವರು ಮರ್ಯಾದೆ ಇಲ್ಲದೆ ತೆಗಳುವುದೇ ಕಸ
ತಂದೆ, ತಾಯಿ, ಗುರು ಮತ್ತು ವೃದ್ಧರನ್ನು ಗೌರವಿಸುವುದೇ ರಸ

ಇದನ್ನೆಲ್ಲಾ ತತ್ವ, ವಿಜ್ಞಾನ, ಧರ್ಮ, ಸಮಾಜವೆಲ್ಲ ಒಪ್ಪುವುದು
ರಸದಿಂದ ಕಸ, ಕಸದಿಂದ ರಸವೆಂಬುದೇ ದೇವನುಡಿ.



✍ **ಎಂ.ಪಿ. ರಂಗನಾಥ್**
ಸಿಡ್ನಿ, ಆಸ್ಟ್ರೇಲಿಯಾ

## ನಮ್ಮನ್ನಗಲಿದ ನಮ್ಮವರಿಗೆ–ಸಂಘದ ಶ್ರದ್ಧಾಂಜಲಿ

**ಶ್ರೀಮತಿ ಕೆ.ಟಿ. ಸೀತಮ್ಮ (85), ಶ್ರೀಮತಿ ಕೆ.ಟಿ. ಅನುಸೂಯ,** ಕಿತ್ತಿಗಾನಹಳ್ಳಿ ತಿಮ್ಮಪ್ಪಯ್ಯನವರ ಮಕ್ಕಳು.

**ಶ್ರೀಮತಿ ಉಮಾ ಕೆ.ಎಸ್.** ಕೋಂ. ಕೆ.ಆರ್. ಶಶಿಧರ್ ಕೃಷ್ಣ (69) ಸದಸ್ಯ ಮಧುಸೂದನ್ ರವರ ಸೋದರಿ.

**ಶ್ರೀಮತಿ ಸತ್ಯವತಿ ಶೇಷಾಚಲ** (68) ಸದಸ್ಯ ಶೇಷಾಚಲ ಅವರ ಪತ್ನಿ.

**ಶ್ರೀನಿವಾಸಮೂರ್ತಿ** (72) ಸದಸ್ಯೆ ಪಂಕಜಾಮೂರ್ತಿಯವರ ಪತಿ

**ಎ.ಎಲ್. ಸತ್ಯನಾರಾಯಣ್** (82), ಸ್ಥಾಪಕ ಸದಸ್ಯ ಎ.ವಿ. ಲಕ್ಷ್ಮಣಯ್ಯರ್ ಅವರ ಮಗ.

**ಶ್ರೀಮತಿ ಇಂದ್ರಮ್ಮ (78),** ಸದಸ್ಯೆ ರಾಜೇಶ್ವರಿಯವರ ಅತ್ತೆ.

## ಅಭಿನಂದನೆ



ಸಂಘದ ಸದಸ್ಯರಾದ ಡಾ. ವಿ. ಛಾಯಾಪತಿ ಯವರು ಬೆಳಗಾಂ ವಿಟಿಯುನಿಂದ 15ನೇ ವಾರ್ಷಿಕ ಘಟಿಕೋತ್ಸವದಲ್ಲಿ `Detention & Mitigation of Voltage Collapse in power systems' ಎಂಬ ಪ್ರಬಂಧಕ್ಕೆ ಗೌರವ ಡಾಕ್ಟರೇಟ್ ಪದವಿಯನ್ನು 27.5.2016ರಂದು ಪಡೆದಿರುತ್ತಾರೆ.

ಸಂಘ ಶ್ರೀಯುತ ಡಾ. ಛಾಯಾಪತಿಯವರಿಗೆ ಶುಭ ಹಾರೈಸುತ್ತದೆ.

## ಸಂಘದ 'ಪ್ರತಿಭಾ ಪುರಸ್ಕೃತ' ವಿದ್ಯಾರ್ಥಿಗಳು

### 10ನೇ ತರಗತಿ

| | |
|---|---|
| ಕೃಷ್ಣಾ ಶ್ರೀನಿವಾಸ್ | ನಿಧಿಶ್ರೀ ನಂದಕುಮಾರ್ |
| ಅರ್ಜುನ್ ದೇಶಪಾಂಡೆ | ಮಿಲಿಂದ್ ಆರ್. ಕಶ್ಯಪ್ |
| ಸಮರ್ಥ್ ಕಶ್ಯಪ್ | ತೇಜಸ್ ಕಶ್ಯಪ್ |
| ವಾಣಿಶ್ರೀ ರಾಮಕೃಷ್ಣ | ಸುಮುಖ ಆರ್. |
| ಅದಿತಿ ಗಣೇಶ್ | ಅಶ್ವಿನ್ |

### ದ್ವಿತೀಯ ಪಿಯುಸಿ

| | |
|---|---|
| ಎನ್. ವಿಶ್ವಾಸ್ | ಪ್ರಣತಿ ಸುರೇಶ್ |
| ಪ್ರಣವ್ ಎಂ. ಶರ್ಮಾ | ಪೂಜಾ ಉಮಾಶಂಕರ್ |
| ಅನುಶ್ ಶ್ರೀಧರ್ | ಶರ್ವದಾ ವೆಂಕಟೇಶಮೂರ್ತಿ |
| ತೇಜಸ್ವಿನಿ ರವಿಶಂಕರ್ | ಮಣಿಕಂಠ ಗಣೇಶ್ |
| ಸಾಯಿ ಸಿಂಧೂರಕುಮಾರ್ | ಜಯಂತ್ ಡಿ. |
| ಸೌಂದರ್ಯ ಸುಂದರೇಶ್ | ಸ್ಮಿತಾ ಎಸ್. ದೀಕ್ಷಿತ್ |

### ಪದವಿ

ಬಿ.ಆರ್. ಜಿ. ಶಿಶಿರ್ ನಾರಾಯಣ್, B.Sc.,
ಶ್ವೇತಾ ಎ.ಕೆ., B.E.
ಶ್ರೀನಿವಾಸಕುಮಾರ್, M.A. English
ಸುಹಾಸಿನಿ ಮಣಿ, M.Tech
ಅಭಿಲಾಷ ಪ್ರದೀಪ್, M.Tech

## ಹೊಸ ಪೋಷಕ ಸದಸ್ಯರ ಸೇರ್ಪಡೆ

| | | |
|---|---|---|
| ಶ್ರೀಯುತರಾದ | ಬಿಂದು ವೆಂಕಟೇಶ್ | 5000/– |
| | ಕೀರ್ತಿ ಕಶ್ಯಪ್ | 5000/– |
| | ಹರ್ಷ ನಾಗರಾಜ್ | 5000/– |
| | ಸಂಜಯ್ ಅಯ್ಯರ್ | 5000/– |

## ಹೊಸ ಸದಸ್ಯರ ಸೇರ್ಪಡೆ

| | | |
|---|---|---|
| ಶ್ರೀಯುತರಾದ | ಪ್ರದೀಪ್ ಎಸ್. | 1,000/– |
| | ಉಮೇಶ್ ಟಿ.ಎನ್. | 1,000/– |
| | ಚಂದ್ರಶೇಖರ್ ಜಿ.ಎ. | 1,000/– |
| | ರಾಧಾಕೃಷ್ಣ ಎಸ್.ಆರ್. | 1,000/– |
| | ಶ್ರೀರಾಮ್ ಬಿ.ಜಿ. | 1,000/– |

## ವಾರ್ತಾಚಿತ್ರಗಳು



*ಸಂಘದ ಪೋಷಕರಾದ ಶ್ರೀ ಆರ್.ಎಸ್. ರಾಜಗೋಪಾಲ್‌ರವರು 2016ರ ಕೆಂಪೇಗೌಡ ಪ್ರಶಸ್ತಿಯನ್ನು ಉತ್ತಮ ಶಿಕ್ಷಕರು ಎಂದು ಪಡೆದಿದ್ದಾರೆ.*



*ನಮ್ಮ ಸಂಘದ ಹಿರಿಯ ಸದಸ್ಯರಾದ ಶ್ರೀಮತಿ ಸುಮಿತ್ರಮ್ಮ ಮತ್ತು ಶ್ರೀ ಎಸ್.ಕೆ. ಅನಂತಕೃಷ್ಣರವರ ಸೊಸೆ ಹಾಗೂ ಶ್ರೀ ಮಂಜುನಾಥ್‌ರವರ ಪತ್ನಿ ಶ್ರೀಮತಿ ಸರಸ್ವತಿ ಮಂಜುನಾಥ್‌ರವರು 2016ರ ಕೆಂಪೇಗೌಡ ಪ್ರಶಸ್ತಿಯನ್ನು ಉತ್ತಮ ಉಪಾಧ್ಯಾಯಿನಿ ಎಂದು ಪಡೆದಿರುತ್ತಾರೆ.*




ಕಲಾವಂತ ಪ್ರಶಸ್ತಿ : ಸಂಘದ ಸದಸ್ಯ ಶ್ರೀ ಕಾರ್ತಿಕ್ ರವಿಯವರಿಗೆ 'ಕರ್ನಾಟಕ ಫೈನ್ ಆರ್ಟ್ಸ್ ಕೌನ್ಸಿಲ್' ದಿ. 29.05.2016ರಂದು ಅತ್ಯುತ್ತಮ ಪಕ್ಕವಾದ್ಯ ಪಟು ಎಂದು ಸಂಗೀತ ವಿದುಷಿ ಶ್ರೀಮತಿ ಕನ್ಯಾಕುಮಾರಿಯವರಿಂದ ಪ್ರಶಸ್ತಿ ಸ್ವೀಕರಿಸುತ್ತಿರುವುದು.

## ತಿಮ್ಮಗುರು ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ದ ತಾತ್ಪರ್ಯಗಳು



ನಗುವು ಸಹಜದ ಧರ್ಮ... ನಗಿಸುವುದು ಪರಧರ್ಮ
ನಗುವ ಕೇಳುತ ನಗಿಸುವುದತಿಶಯದ ಧರ್ಮ.
ನಗುವ.... ನಗಿಸುವ... ನಗಿಸಿ.... ನಗುತಾ ಬಾಳುವ ವರವ
ಮಿಗೆ ನೀನು ಬೇಡಿಕೊಳ್ಳೋ ಮಂಕುತಿಮ್ಮ !!

(ನಗು=ಆನಂದ, ಸಂತೋಷಗಳ ಸೂಚಕ)

ಪರಬ್ರಹ್ಮ ಸ್ವರೂಪವೇ ಆನಂದ ಎಂದು ತಿಳಿಯುತ್ತೇವೆ. 'ನಗೆ ಮೊಗದರಸ' ಎಂದು ಭಗವಂತನನ್ನು ದಾಸರು ವರ್ಣಿಸಿದ್ದಾರೆ. 'ಹಸಿತಂ ಮಧುರಂ' ಎಂದು ಕೃಷ್ಣನ ಮಂದಹಾಸವೇ ಮಧುರ ಎಂದು ಮಧುರಾಷ್ಟಕದಲ್ಲಿದೆ. ಶ್ರೀರಾಮನನ್ನು ಪೂರ್ವಭಾಷಿ, ಮಿತ ಭಾಷಿ, ಸ್ಮಿತಭಾಷಿ ಎಂದೂ ಕವಿಗಳು ವರ್ಣಿಸಿದ್ದಾರೆ. ಭಗವಂತನ ಆನಂದದ ಮಾರ್ದನಿಯೇ ನಗು ಎಂದು ಹೇಳಬಹುದು. ಇಂತಹ ನಗು ಪ್ರಾಣಿಲೋಕದಲ್ಲಿ ಮನುಷ್ಯನಿಗೆ ಮಾತ್ರವೇ ಇದೆ. ಪರಿಹಾಸದ ನಗು, ವ್ಯಂಗ್ಯ ನಗು, ಅಟ್ಟಹಾಸದ ನಗು, ಅವಹೇಳನದ ನಗು... ಇತ್ಯಾದಿ. ಆದರೆ ಪೂಜ್ಯರಾದ ಡಿ.ವಿ.ಜಿ.ಯವರು ನಿಷ್ಕಲ್ಮಶ ನಗುವನ್ನು ಈ ಮುಕ್ತಕದಲ್ಲಿ ಪ್ರತಿಪಾದಿಸಿದ್ದಾರೆ.

ಮಗುವಿನ ನಿಷ್ಕಲ್ಮಶ ನಗೆ ನೋಡಿ ಸಂತೋಷ ಪಡದೆ ಇರುವವರು ಯಾರಿದ್ದಾರೆ? ಆ ಮಗುವಿನ ನಗೆಯಿಂದ ನಮ್ಮ ಹೃದಯ ಅರಳಿ ನಮಗರಿವಿಲ್ಲದಂತೆಯೇ ಆನಂದ ಉಂಟಾಗಿ ಮುಖದಲ್ಲಿ ಮಂದಹಾಸ ಮಿನುಗುತ್ತದೆ.

ಸಂತೋಷವಾಗಿರಬೇಕೆಂಬುದೇ ಮಾನವನ ಸಹಜ ಆಶಯ. ಮನಸ್ಸಿನ ಪ್ರಶಾಂತತೆ, ಆಂತರಿಕ ಪರಿಶುದ್ಧತೆ, ನಿಷ್ಕಲ್ಮಶ ನಗುವು ನಮ್ಮ ಸಹಜ ಸ್ವಭಾವವಾಗಿರಲಿ ಎಂದು ಡಿ.ವಿ.ಜಿ. ಅವರು ತಿಳಿಸಿದ್ದಾರೆ. ಅದನ್ನೇ ನಗುವು ಸಹಜದ ಧರ್ಮ ಎಂದಿದ್ದಾರೆ. ಸ್ವಿಚ್ ಹಾಕಿದೊಡನೆ ವಿದ್ಯುದ್ದೀಪ ಬೆಳಗುವಂತೆ ನಿನ್ನಲ್ಲೇ ಇರುವ ಈ ಸಂತೋಷವನ್ನು ಪರರಿಗೂ ನೀಡಿ ಅವರನ್ನೂ ಸಂತೋಷಪಡಿಸು. ನಾವು ನಕ್ಕರೆ ಜಗತ್ತೇ ನಮ್ಮೊಡನೆ ನಗುತ್ತದೆ. ನಮ್ಮ ನಗು ಪ್ರತಿಫಲಿಸುತ್ತದೆ. ಸಂತೋಷದ ಸೃಷ್ಟಿಕರ್ತರು ನಾವೇ... ಆದ್ದರಿಂದ ನಗಬೇಕು... ನಗಿಸಬೇಕು... ನಗುವಿಗೆ ಚೆಲುವನ್ನು ಚಿಮ್ಮಿಸುತ್ತಾ ಇರಬೇಕು. ನಾವು ಇತರರನ್ನು ಸಂತೋಷಪಡಿಸುವುದೇ ಪರಧರ್ಮ. ಇತರರು ಸಂತೋಷಪಡುವುದನ್ನು ಕಂಡು ಅದಕ್ಕೆ ಮತ್ಸರಿಸದೇ ಅವರ ಆನಂದದಲ್ಲಿ ಜೊತೆಗೂಡುವ ವಿಶಾಲ ಮನೋಭಾವ ನಾವು ಬೆಳೆಸಿ ಕೊಳ್ಳಬೇಕು. ಅದೇ ಅತಿಶಯದ ಅಸಾಧಾರಣವಾದ ಧರ್ಮ. ಎಲ್ಲಿ ವಿಶಾಲಬುದ್ಧಿ ಇರುತ್ತದೆಯೋ, ಅಲ್ಲಿ ಭಗವಂತನ ಕೃಪಾದೃಷ್ಟಿ ಖಂಡಿತವಾಗಿಯೂ ಇರುತ್ತದೆ.

✍ ಲಕ್ಷ್ಮೀದೇವಿ

## ಅಹಂ ಮತ್ತು ಸಂಬಂಧ

'ಅಹಂ' ಎಂದರೇನು ? ಶ್ರೀ ಶಂಕರಾಚಾರ್ಯರು ಹಾಗೂ ಸ್ವಾಮಿ ವಿವೇಕಾನಂದರು ಹೇಳಿರುವಂತೆ 'ಅಹಂ ಬ್ರಹ್ಮಾಸ್ಮಿ' ಎಂದರೆ ನನ್ನಲ್ಲೇ ಭಗವಂತನಿದ್ದಾನೆ. 'ಅಹಂ' ಎಂದರೆ ನಾನು ಎಂಬ ಮಮಕಾರ. ಸಂಬಂಧ ಎಂದರೇನು ಎಂಬುದನ್ನು ಅರ್ಥೈಸಿ ಹೇಳುವುದು ಸ್ವಲ್ಪ ಮಟ್ಟಿಗೆ ಕಷ್ಟ. ತಂದೆ ತಾಯಿ, ಅಣ್ಣ–ತಮ್ಮ, ಅಕ್ಕ–ತಂಗಿ, ಬಂಧು–ಬಳಗ ಮತ್ತು ಸ್ನೇಹಿತರು ಎಲ್ಲರ ಸಂಬಂಧಗಳನ್ನು ನಾವು ಹೊಂದಿರುತ್ತೇವೆ. ಇಲ್ಲಿ 'ನಾನು' ಎಂಬ ಎರಡಕ್ಷರ ಕಂಡುಬಂದಾಗ ಸಂಬಂಧಕ್ಕೆ ಇಲ್ಲಿ ಸ್ಥಾನವಿರುವುದಿಲ್ಲ. ಶ್ರೀ ಶಂಕರರು ಹೇಳಿಕೆಯನ್ನು ನೋಡುವಾಗ, ಪ್ರತಿಯೊಬ್ಬರಲ್ಲೂ ಭಗವಂತನಿದ್ದಾನೆ. ಅಂದರೆ ನಮ್ಮಲ್ಲಿರುವ ಆ ದೈವಿಕ ಗುಣ ಎಂಬ ಅರ್ಥ.

ಆಂಗ್ಲ ಭಾಷೆಯ ಈಗೋ ಬಿಟ್ಟು, ನಮ್ಮ ಕನ್ನಡದಲ್ಲಿ ಹೇಳುವಂತೆ ಏಗೋದನ್ನು ಕಲಿತರೆ ಹಲವಾರು ಸಮಸ್ಯೆಗಳು ನೀಗುತ್ತವೆ. ಎಲ್ಲಿ 'ಅಹಂ' ಇರುವುದೋ ಅಲ್ಲಿ ಸಂಬಂಧಗಳು ನಶಿಸಿ ಹೋಗುತ್ತದೆ. ಇವೆರಡನ್ನೂ ಸಮತೋಲನ ಮಾಡಿದಾಗ ಬದುಕು ಬಂಗಾರ ವಾಗುತ್ತದೆ. 'ಅಹಂ'ನಿಂದ ಆಗುವ ಲಾಭಕ್ಕಿಂತ ನಷ್ಟವೇ ಬಲು ದೊಡ್ಡದು. ಮನುಷ್ಯನಿಗೆ ಸ್ವಾಭಿಮಾನವಿರಬೇಕು. ಆದರೆ ದುರಭಿಮಾನ ಸಲ್ಲದು. ಇದಕ್ಕೆ ಉದಾಹರಣೆ 'ದುರ್ಯೋಧನ'. ದುರಭಿಮಾನ ಮನುಷ್ಯನ ಬೆಳವಣಿಗೆಯನ್ನು ಕುಂಠಿಸುತ್ತದೆ.

ಇನ್ನು ಸಂಬಂಧಗಳ ಬಗ್ಗೆ ಹೇಳುವುದೆಂದರೆ ಈಗ ಎಲ್ಲಿದೆ ಸಂಬಂಧ? ಇದು ಒಂದು ಅರ್ಥವೇ ಇಲ್ಲದ ಪದ. ಯಾರಿಗೂ ಬೇಡವಾದ ಒಂದು ಭಾವನೆ ಎಂದರೆ ಪ್ರಾಯಶಃ ತಪ್ಪಾಗಲಾರದು. ಇದಕ್ಕೆ ಹತ್ತು ಹಲವಾರು ಕಾರಣಗಳಿವೆ. ಆದರೆ ಮುಖ್ಯವಾದ ಕಾರಣ 'ಅಹಂ'. ಹಿಂದಿನ ದಿನಗಳಲ್ಲಿ ಒಟ್ಟು ಕುಟುಂಬಗಳಿದ್ದು, ಸಂಬಂಧ ಗಳಿಗೆ, ಹೆಚ್ಚು ಪ್ರಾಮುಖ್ಯತೆ ನೀಡುತ್ತಿತ್ತು. ಆದರೆ ಈಗ ಹಾಗಲ್ಲ. ಪ್ರತಿಯೊಬ್ಬರಿಗೂ ಅವರದೇ ಆದ ಸಮಸ್ಯೆಗಳು, ಆಸಕ್ತಿಗಳು ಇರುವುದರಿಂದ ಸಂಬಂಧಗಳು ಅರ್ಥ ಕಳೆದುಕೊಳ್ಳುತ್ತಿವೆ. ಇದು ತಪ್ಪು ಎಂದು ಹೇಳಲಾಗುವುದಿಲ್ಲ.

ಇಂದಿನ ಆಧುನಿಕತೆಯ ಯುಗದಲ್ಲಿ ಯಾರೊಬ್ಬರಿಗೂ ಸಂಯಮ ಇರುವುದಿಲ್ಲ. ದಿನವಿಡೀ ದುಡಿದು ಬಂದಾಗ, ಬೇಕಾಗಿರುವುದು ನೆಮ್ಮದಿ ಹಾಗೂ ವಿಶ್ರಾಂತಿ. ಅತಿಥಿಗಳು ಮನೆಗೆ ಬಂದರೆ, ಒಂದು ರೀತಿಯ ಮುಜುಗರ, ಹಾಗೆಯೇ ಸಮಾರಂಭಗಳಿಗೆ ಹೋಗುವುದು ಎಲ್ಲವೂ ಈಗ ಬೇಕೆನಿಸುವುದಿಲ್ಲ. ಕಾರಣ ಸಂಬಂಧಗಳು ಅರ್ಥ ಕಳೆದು ಕೊಳ್ಳುತ್ತಿವೆ. ಎಲ್ಲಾ ಸಂಬಂಧಗಳಿಗೂ ಒಂದು ಕಾರಣವಿರುತ್ತದೆ. ಈ ಸಂಬಂಧಗಳಿಂದ ನಮಗಾಗುವ ಪ್ರಯೋಜನವೇನು? ಎಂಬ ಭಾವ ಕಾಡುತ್ತಿರುತ್ತದೆ.

ನಮ್ಮೆಲ್ಲರ ಸಂಬಂಧಗಳು ಈಗ ಬರೀ ಫೇಸ್‌ಬುಕ್, ವಾಟ್ಸ್‌ಅಪ್ ಮತ್ತು ಮೆಸೇಜ್‌ಗಳಿಗೆ ಸೀಮಿತವಾಗಿರುತ್ತದೆ. ಅಲ್ಲಿ ಕೂಡ ನಮ್ಮ 'ಅಹಂ' ತನ್ನ ಪ್ರಾಬಲ್ಯವನ್ನು ಪ್ರದರ್ಶಿಸುತ್ತದೆ. ನಾವು ನಮ್ಮ 'ಅಹಂ' ಮೊಟಕುಗೊಳಿಸಿ 'ಸಂಬಂಧಗಳಿಗೆ' ಹೆಚ್ಚು ಆದ್ಯತೆ ಕೊಡೋಣ. ಇದರಿಂದ ಮನೋಕ್ಲೇಶಗಳು ಕಡಿಮೆಯಾಗಿ, ಪ್ರೀತಿ ವಿಶ್ವಾಸಗಳು ಹೆಚ್ಚಲಿ ಎಂದು ಆಶಿಸೋಣ.

✍ ಬಿ.ಪಿ. ಸರಸ್ವತಿ

# ಕೊಳದ ಜಲ ನಿನ್ನ ಮನ



**ಭ**ಗವಾನ್ ಬುದ್ಧ ಮತ್ತು ಆತನ ಪ್ರೀತಿಯ ಶಿಷ್ಯನು ನಡೆದು ಮತ್ತೊಂದು ಊರಿಗೆ ಹೋಗುತ್ತಿದ್ದರು. ಊಟ ಮಾಡುವ ಸಮಯದಲ್ಲಿ ಒಬ್ಬ ಶ್ರೀಮಂತ ಬಂದು ಬುದ್ಧನನ್ನು ಬಾಯಿಗೆ ಬಂದ ಹಾಗೆ ಬಯ್ಯ ತೊಡಗಿದ. ಬುದ್ಧನೂ ಪ್ರತಿಕ್ರಿಯೆ ತೋರದೆ ಅವನನ್ನೇ ನೋಡುತ್ತಾ ಕುಳಿತಿದ್ದ. ಅವನ ಪ್ರಿಯ ಶಿಷ್ಯ ಆನಂದನಿಗೆ ರಕ್ತ ಕುದಿಯುತ್ತಿತ್ತು. ಅವನ ಮುಷ್ಠಿ ಬಿಗಿಯುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಆ ಶ್ರೀಮಂತ ಬೈದು ಬೈದು ಬೇಜಾರಾಗಿ ಹೊರಟು ಹೋದ, ಆನಂದ ಬುದ್ಧನಿಗೆ ಕೇಳಿದ "ಅವನು ಹಾಗೆ ನಿನ್ನನ್ನು ತೆಗಳುತ್ತಿದ್ದರೂ ನೀನು ಹೇಗೆ ಸುಮ್ಮನಿದ್ದೆ? ನಿನಗೆ ಕೋಪ ಬರುವುದಿಲ್ಲವೇ? ಆಗ ಬುದ್ಧ ನುಡಿದ, ಆನಂದ ನಿನಗೆ ಯಾರಾದರೂ ಬಂದು ಕಾಣಿಕೆ ಕೊಡಲು ಬಂದಿದ್ದಾರೆ ಎಂದು ತಿಳಿದುಕೋ, ಅದನ್ನು ನೀನು ಸ್ವೀಕರಿಸದಿದ್ದರೆ ಏನಾಗುತ್ತದೆ?" ಅವನೇ ಮರಳಿ ತೆಗೆದುಕೊಂಡು ಹೋಗುತ್ತಾನೆ ಎಂದ ಆನಂದ. "ಹಾಗೆಯೇ ನಾನು ಅವನ ಬೈಗುಳನ್ನು ಸ್ವೀಕರಿಸಲಿಲ್ಲ. ಅವನೇ ಪಾಪ ಮರಳಿ ತೆಗೆದುಕೊಂಡು ಹೋದ, ಹೀಗೆಂದು ಮತ್ತೆ ಬುದ್ಧ ನುಡಿದ. ಆನಂದ ಅವನು ಕೋಪ ಮಾಡಿಕೊಂಡಿದ್ದಾನೆಂದು ನೀನು ಸಿಟ್ಟು ಮಾಡಿಕೊಳ್ಳಬಾರದು! ಮನಸ್ಸನ್ನು ಶಾಂತವಾಗಿಟ್ಟುಕೊಂಡಿರಬೇಕು.

ಮಧ್ಯಾಹ್ನ ಕಾಡಿನ ಮಧ್ಯೆ ನಡೆದು ಬಂದರು. ಬುದ್ಧನಿಗೆ ಈಗ ಅರವತ್ತು ವರ್ಷ, ಹೆಚ್ಚು ನಡೆದರೆ ಶ್ರಮವಾಗುತ್ತದೆ. ಮರದ ಕೆಳಗೆ ಕುಳಿತು, "ಆನಂದ ಇಲ್ಲಿ ಹತ್ತಿರವೆಲ್ಲೋ ನೀರಿನ ತೊರೆ ಇದ್ದ ಹಾಗೆ ಭಾಸವಾಗುತ್ತದೆ. ಸ್ವಲ್ಪ ಕುಡಿಯುವ ನೀರು ತರುತ್ತೀಯಾ? ಎಂದ. ಸರಿ ಎಂದು ಆನಂದ ಪಾತ್ರೆಯೊಂದನ್ನು ಹಿಡಿದುಕೊಂಡು ಹೊರಟ. ಹತ್ತಿರದಲ್ಲೇ ತೊರೆ ಇದೆ. ಆದರೆ ಆಗ ತಾನೇ ಕೆಲವು ಬಂಡಿಗಳು, ದನ ಕರುಗಳು ಅದನ್ನು ದಾಟಿ ಹೋಗಿದ್ದರಿಂದ ನೀರೆಲ್ಲ ರಾಡಿಯಾಗಿದೆ. ತಳದ ಕಸ, ಎಲೆ ಕೊಳಕೆಲ್ಲಾ ತೇಲಿ ಮೇಲೆ ಬಂದು ಅಶುದ್ಧವಾಗಿದೆ. ಆನಂದ ನೀರು ತರದೆ ಹಾಗೆ ಬಂದು ನೀರು ಕೊಳಕಾದುದನ್ನು ತಿಳಿಸಿದ. ಬುದ್ಧ ಅವನನ್ನು ಅಲ್ಲಿಗೆ ಹೋಗಿ ನೀರು ತರಲು ಹೇಳಿದ, ಮತ್ತೆ ಅಲ್ಲಿ ಹೋಗಿ ಮರಳಿ ಬಂದು ಇನ್ನೂ ನೀರು ತಿಳಿಯಾಗಿಲ್ಲ ಎಂದು ವರದಿ ಒಪ್ಪಿಸಿದ. ಬುದ್ಧ ಅವನ ಮಾತಿಗೆ ಮನಕೊಡದೆ ಮತ್ತೊಮ್ಮೆ ಹೋಗು ಎಂದು ಒತ್ತಾಯಿಸಿದ. ಅರೆ ಮನಸ್ಸಿನಿಂದ ಹೋದ ಆನಂದ ಬರುವಾಗ ಪಾತ್ರೆಯಲ್ಲಿ ತಿಳಿ ನೀರು ತಂದ. ಅಲ್ಲ ಆನಂದ ನೀರು ಕೊಳೆಯಾಗಿದೆ ಎಂದು ಹೇಳಿದ್ದೆಯಲ್ಲ, ಆದರೆ ಇದು ಇಷ್ಟೊಂದು ತಿಳಿಯಾಗಿದೆ. ನೀನು ಏನು ಚಮತ್ಕಾರ ಮಾಡಿದೆ? ಎಂದು ಕೇಳಿದ ಬುದ್ಧ, ಆನಂದ ನಾನು ಏನೂ ಮಾಡಲಿಲ್ಲ. ಪ್ರತಿ ಸಲ ಹೋದಾಗಲೂ ನೀರು ಹಿಂದಿನ ಸಲಕ್ಕಿಂತ ತಿಳಿಯಾಗುತ್ತಾ ಬಂದಿತ್ತು. ನೀರು ತಿಳಿಯಾದದ್ದು ತನ್ನಷ್ಟಕ್ಕೆ ತಾನೇ ಎಂದು ಹೇಳಿದ. ಆಗ ಬುದ್ಧನೆಂದ ಆನಂದ ನಮ್ಮ ಮನಸ್ಸು ಅಷ್ಟೇ. ನೀರಿನಂತೆ ಕೋಪದಿಂದ, ದ್ವೇಷದಿಂದ, ಅಸೂಯೆಯಿಂದ ಮನಸ್ಸು ರಾಡಿಯಾಗುತ್ತದೆ. ಆಗ ನೀನೇನೂ ಮಾಡಬೇಕಿಲ್ಲ, ಸುಮ್ಮನಿದ್ದು ಬಿಡು. ಶಾಂತತೆಯನ್ನು ತಾಳು. ಆಗ ನಿಧಾನವಾಗಿ ನೀರಿನಂತ ಮನಸ್ಸು ಕೂಡ ಕೋಪ, ತಾಪ, ಅಸೂಯೆಗಳನ್ನು ಕಳೆದುಕೊಂಡು ತಿಳಿಯಾಗುತ್ತದೆ. ಇದನ್ನೇ ಡಿ.ವಿ.ಜಿ. ಹೇಳುವುದು

**ಕೊಳದ ಜಲ ನಿನ್ನ ಮನ, ಲೋನರದರೊಳಗಿಳಿಯೇ**
**ತಳ ಕಸ ತೇಲುತ್ತ ಬಗ್ಗಡವಹುದೇ।**
**ಕಲಕದಿದ್ದರೆ ಕೊಂಚ ಬಿಟ್ಟಾರ್‍ಡಡದು ಮರಳಿ**
**ತಿಳಿಯಹುದು ಶಾಂತಿಯಲಿ – ಮಂಕುತಿಮ್ಮ**



✍ ಶ್ರೀನಿವಾಸಯ್ಯ

## ನಡೆದದ್ದು...

✍ ಭ್ರಮರ ಗೋಪಿನಾಥ್



ನಮ್ಮ ಸಮುದಾಯದಲ್ಲಿ ಶ್ರೀಮತಿ ಅಮ್ಮಣ್ಣಮ್ಮನವರು ಕಿರಿಯ ವಯಸ್ಸಿನಲ್ಲಿಯೇ ಪತಿಯನ್ನು ಕಳೆದುಕೊಂಡರೂ, ಪ್ರಸೂತಿ ಮಾಡುವುದನ್ನೇ ವೃತ್ತಿಯಾಗಿಸಿಕೊಂಡು ಜಾತಿ ಭೇದವಿಲ್ಲದೆ, ಸೇವಾ ಮನೋಭಾವದಿಂದ ಯಾವುದೇ ನಿರೀಕ್ಷೆಗಳಿಲ್ಲದೆ ಉತ್ಸಾಹದಿಂದ ಮಾಡುತ್ತಿದ್ದರು. 'ಮಿಡ್‌ವೈಫ್ ಅಮ್ಮಣ್ಣಮ್ಮ'ನವರೆಂದೇ ಪ್ರಸಿದ್ಧ ರಾಗಿದ್ದರು. ಬೆಂಗಳೂರಿನ ವಿಶ್ವೇಶ್ವರಪುರಂನಲ್ಲಿ ತಮ್ಮ ವೆಂಕಟ ರಮಣಯ್ಯ–ಮೀನಾಕ್ಷಿಯವರೊಂದಿಗೆ ನೆಲೆಸಿದ್ದರು.

ಒಮ್ಮೆ ಈಕೆ, ಪ್ರಸೂತಿ ಕೆಲಸ ಮುಗಿಸಿ ವಾಪಸಾಗುತ್ತಿದ್ದಾಗ, ಒಬ್ಬ ಕೀಟಲೆ ಬುದ್ಧಿಯ ಬ್ರಿಟಿಷ್ ಸೈನಿಕನು ಈಕೆಯನ್ನು ತಡೆದು 'ಒಂದು ಹಾಡು ಹೇಳು' ಎಂದು ಆಂಗ್ಲ ಭಾಷೆಯಲ್ಲಿ ಕೇಳಿದನು. ಅದಕ್ಕೆ ಅಮ್ಮಣ್ಣಮ್ಮನವರು 'ಎನಕ್ಕು ವರುದ್ಲೆ, ನಾಪೋಗೋಣು' ಎಂದರೂ ಬಲವಂತವಾಗಿ 'ಹಾಡು' ಎಂದನಂತೆ. ಈಕೆಯು ಹಾಡಿನ ರೂಪದಲ್ಲಿ ರಾಗವಾಗಿ

**"ನಾ ಒದು ಪಾಟ್ಟು ಚೊಲ್ಲುದು?**
**ಉಂದೆ ಚೌತ್ಲು ಮೋಕ್ಕು ಚೊಮ್ಮೊಣ್ಣು ಅಡುಚ**
**ನಾ ಒದು ಪಾಟ್ಟು ಚೊಲ್ಲುದ್ದು?**
**ಉಂದೆ ಫಿರಂಗಿ ಗುಂಡು ಪಾಳಾಗಿ ಪೋಗ.**
**ನಾ ಒದು ಪಾಟ್ಟು ಚೊಲ್ಲದ್ದು?**
**ಉಂದೆ ಊರುಕ್ಕು ನೀ ಪೋ, ತಿರುಂಬಿ ನಿ ವರಾಂಡ**
**ನಾ ಒದು ಪಾಟ್ಟು ಚೊಲ್ಲ?"**

ಎಂದು ಹಾಡಿದಾಗ, ಖುಷಿಯಿಂದ ಒಂದು ಬೆಳ್ಳಿ ನಾಣ್ಯ ಕೊಟ್ಟು ಕಳುಹಿಸಿದನಂತೆ. ಈ ಪ್ರಸಂಗವು ಅಂದಿನ ದಿನಗಳಲ್ಲಿ ಎಲ್ಲರ ಮನೆ ಮಾತಾಗಿತ್ತು. ಈಗಲೂ ಹಾಸ್ಯಪ್ರಜ್ಞೆ ಇರುವ ಹಳಬರು ಹಾಸ್ಯ ಪ್ರಸಂಗ ಗಳನ್ನು ಎಂಗಳದೇ ಭಾಷೆಯಲ್ಲಿ ಕೇಳುವುದಕ್ಕೆ ಆನಂದವಾಗಿರುತ್ತದೆ.

# ಆದಿಗುರು ಶ್ರೀ ಶಂಕರಾಚಾರ್ಯರ ಕೃತಿಗಳು



**ಸರ್ವವೇದಾಂತ**
**ಸಿದ್ಧಾಂತ ಗೋಚರಂ**
**ತಮಗೋಚರಂ।**
**ಗೋವಿಂದಂ**
**ಪರಮಾನಂದಂ**
**ಸದ್ಗುರುಂ**
**ಪ್ರಣತೋಸ್ಮ್ಯಹಂ॥**

ಆದಿಗುರು ಶ್ರೀ ಶಂಕರಾಚಾರ್ಯರು ವೈಶಾಖ ಶುದ್ಧ ಪಂಚಮಿಯಂದು ಕೇರಳದ ಕಾಲಟಿಯಲ್ಲಿ ದೈವಭಕ್ತರಾದ ಆರ್ಯಾಂಬಾ–ಶಿವಗುರು ದಂಪತಿಗಳಲ್ಲಿ ಜನಿಸಿದರು. ಅವರ ಜನನ ಕಾಲದಲ್ಲಿ ಭಾರತದಾದ್ಯಂತ ಹಿಂದೂ ಧರ್ಮವು ನಶಿಸಿ ಬೌದ್ಧ ಧರ್ಮವು ಪ್ರಚಲಿತದಲ್ಲಿದ್ದು, ಜನರೆಲ್ಲಾ ಧರ್ಮ–ಕರ್ಮ ಭ್ರಷ್ಟರಾಗಿದ್ದರು. ಆಗ ಸನಾತನ ವೇದ ಧರ್ಮವನ್ನು ಪುನರುದ್ಧಾರಗೊಳಿಸಿದ ಶ್ರೀ ಶಂಕರರು ಕರ್ಮಾನುಷ್ಠಾನವನ್ನು ಮಾರ್ಗವಾಗಿ ತಿಳಿಸಿ ಅಪರೋಕ್ಷವಾದ ಮೋಕ್ಷಕ್ಕೆ ಜ್ಞಾನ–ಭಕ್ತಿಗಳೇ ಸಾಧನ ಎಂದು ಪ್ರಚುರಪಡಿಸಿದರು. ಕರ್ಮದಿಂದ (ಯಜ್ಞ, ದಾನ, ತಪಸ್ಸು) ಚಿತ್ತಶುದ್ಧಿಯಾಗುತ್ತದೆ. ಮೋಕ್ಷ, ಮುಕ್ತಿ ಎಂದರೆ ದೇಹಾಂತವಾದ ಮೇಲೆ ದೊರೆಯುವಂತಹುದಲ್ಲ. ಜೀವಿತ ಕಾಲದಲ್ಲೆ ಶೋಕ, ಮೋಹ, ಭಯವಿಲ್ಲದಂತಹ ಅನುಭೂತಿ ಪಡುವಂತಹುದು. ಇದನ್ನೇ ಶ್ರೀ ಶಂಕರರು 'ಜೀವನ್ಮುಕ್ತಿ' ಎಂದು ಕರೆಯುತ್ತಾರೆ.

ಆದಿಗುರುಗಳು ಅದ್ವೈತ ಮತ ಸ್ಥಾಪಕರಲ್ಲ. ಉಪನಿಷತ್ ವಾಕ್ಯವಾದ 'ಅದ್ವೈತ'ವನ್ನು ಮತ್ತೆ ಪ್ರತಿಪಾದಿಸಿದವರು. ಪ್ರತೀ ಮಾನವನಿಗೂ ಮೋಕ್ಷವೇ ಗುರಿ. ಇದನ್ನು ಸಾಧಿಸಲು ಸಾಧಕನು ತನಗೆ ದೊರಕಿದ ಸಾಧನದ ಮೂಲಕ (ಶರೀರ, ಗುರು, ಗ್ರಂಥ, ಶಾಸ್ತ್ರ) ಅಂದರೆ ಶ್ರವಣ, ಮನನ, ನಿಧಿ ಧ್ಯಾಸನದೊಂದಿಗೆ ಸಾಧ್ಯವಾದ ಸಿದ್ಧಿ (ಮೋಕ್ಷ)ವನ್ನು ಹೊಂದಬಹುದು. ಇದಕ್ಕಾಗಿ ಮಾರ್ಗಗಳನ್ನು ಆದಿಗುರುಗಳೇ ತೋರಿದ್ದಾರೆ. ಈ ಸಾಧನೆಯ ಮಾರ್ಗದಲ್ಲಿ ಉತ್ತಮಾಧಿಕಾರಿ, ಮಧ್ಯಮಾಧಿಕಾರಿ ಮತ್ತು ಅಧಿಕಾರಿಗಳು ಇರುತ್ತಾರೆ. ಉತ್ತಮಾಧಿಕಾರಿಗಳಿಗಾಗಿ ತತ್ತ್ವ ಚಿಂತನೆಗಳಾದ ಉಪನಿಷತ್, ಬ್ರಹ್ಮ ಸೂತ್ರ, ಶ್ರೀಮದ್ ಭಗವದ್ಗೀತೆಗಳಿಗೆ ಭಾಷ್ಯ ರಚಿಸಿದ್ದಾರೆ. ಮಧ್ಯಮಾಧಿ ಕಾರಿಗಳಿಗಾಗಿ ಪ್ರಕರಣ ಗ್ರಂಥಗಳನ್ನು ರಚಿಸಿದ್ದಾರೆ. ಅವು ವಿವೇಕ ಚೂಡಾಮಣಿ, ಭಜಗೋವಿಂದಂ. ದೃಗ್ ದೃಶ್ಯ ವಿವೇಕ, ಆತ್ಮಷಟ್ಕ, ನಿರ್ವಾಣಾಷ್ಟಕ, ದಶಶ್ಲೋಕಿ, ಅಪರೋಕ್ಷಾನುಭೂತಿ ಮತ್ತು ಹಲವಾರು. ಇನ್ನು ಉಳಿದವರಿಗಾಗಿ ದೇವಾನುದೇವತೆಗಳನ್ನು ಸ್ತುತಿಸಿ ಸ್ತೋತ್ರ ರಚಿಸಿದ್ದಾರೆ. ಶ್ರೀರಾಮ, ಶ್ರೀಕೃಷ್ಣ, ರಂಗನಾಥ, ಕಾಶಿ ವಿಶ್ವನಾಥ, ಅನ್ನಪೂರ್ಣೆ, ಗಂಗೆ, ನೃಸಿಂಹ, ರಾಜರಾಜೇಶ್ವರಿ, ಅಂಬಿಕೆ, ಗಣಪತಿ, ಸ್ಕಂದ, ಕಾಲಭೈರವ ಇತ್ಯಾದಿ ಸ್ತೋತ್ರಗಳನ್ನು ಹೆಸರಿಸಬಹುದಾಗಿದೆ.

ಪರತತ್ವವನ್ನೇ ಮಾರ್ಮಿಕವಾಗಿ ಸಂಗ್ರಹಸಾರವತ್ತಾಗಿ ಬೋಧಿಸುವ ದಕ್ಷಿಣಾಮೂರ್ತಿ ಸ್ತೋತ್ರ, ಮನೀಷಾ ಪಂಚಕ, ಮಾತೃಪಂಚಕ, ಕೌಪೀನ ಪಂಚಕ, ಹರಿಮೀಡೆ ಮುಂತಾದ ವೇದಾಂತ ಸ್ತೋತ್ರಗಳನ್ನೂ ಕೊಡುಗೆಯಾಗಿ ನೀಡಿದ್ದಾರೆ. ಇನ್ನು ಕಾವ್ಯ ಲಕ್ಷಣ, ನಾನಾರ ಸಭಾವ, ಶಬ್ದಾಲಂಕಾರ, ಗೂಢಾರ್ಥ ಒಳಗೊಂಡಿರುವ ಸೌಂದರ್ಯ ಲಹರಿ, ಶಿವಾನಂದ ಲಹರಿಯನ್ನೂ ರಚಿಸಿದ್ದಾರೆ.

ಶ್ರೀ ಶಂಕರ ಗುರು ಪರಂಪರೆಯಲ್ಲಿ ಜ್ಞಾನವನ್ನು ಮುಚ್ಚಿಟ್ಟುಕೊಳ್ಳದೆ ಎಲ್ಲರಿಗೂ ತಲಪುವಂತೆ ವಿವಿಧ ರೀತಿಯಲ್ಲಿ ಜನಸಾಮಾನ್ಯರಿಗೂ ತಲಪುವ ಉದ್ದೇಶದಿಂದ ಗುರುಗಳು ಕರುಣೆದೋರಿ ಪೂಜಾ ವಿಧಾನವೆಂಬ ಕರ್ಮಮಾರ್ಗವನ್ನು ಅನುಸರಿಸಲು ಪಂಚಾಯತನ ವ್ಯವಸ್ಥೆಯನ್ನೂ ಅರುಹಿದ್ದಾರೆ. (ಗಾಣಪತ್ಯ, ಶೈವ, ಶಾಕ್ತ, ವೈಷ್ಣವ, ಸೌರ್ಯ)

ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರು ಮತ್ತು ಶ್ರೀಮಧ್ವಾಚಾರ್ಯರು ಅನುಸರಿಸಿದ ಮಾರ್ಗಗಳು ಕ್ರಮವಾಗಿ ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತವಾದರೂ, ವೇದದಲ್ಲಿರುವ 'ಏಕಂ ಹಿ ಸತ್ ವಿಪ್ರಾಃ ಬಹುಧಾವದಂತಿ' ಮತ್ತು 'ಏಕೋ ದೇವಃ ಸರ್ವ ಭೂತೇಷು ಗೂಢಃ ಸರ್ವವ್ಯಾಪಿ ಸರ್ವ ಭೂತಾಂತರಾತ್ಮಾ' ಎನ್ನುವ ವಾಕ್ಯದಲ್ಲಿ ಇರುವಂತೆ ತಲುಪುವ ಗುರಿಯು ಪರಬ್ರಹ್ಮನೇ ಆಗಿದೆ.

✍ **ಲಲಿತಾ ರಮೇಶ್**
9945199637

## ಜ್ಯೇಷ್ಠಾಲಕ್ಷ್ಮಿಯ ಹೆಗ್ಗಳಿಕೆ

ಸಮುದ್ರ ಮಂಥನದಲ್ಲಿ ಮಹಾಲಕ್ಷ್ಮಿಯ ಮುನ್ನ ಜ್ಯೇಷ್ಠಾಲಕ್ಷ್ಮಿಯು ಹುಟ್ಟಿದಳು. ಕೆಂಪು ಕಣ್ಣು, ಪಿಂಗಳ ವರ್ಣದ ಕೂದಲು, ಬಿಳಿ ಬಣ್ಣದಿಂದ ಕೂಡಿದ ಕ್ರೂರ ರೂಪಿ.

"ಯಾರ ಮನೆಯಲ್ಲಿ ಗಂಡ ಹೆಂಡತಿಯರು ಜಗಳವಾಡುತ್ತಾರೋ, ಕೊಳಕು, ಅನಾರೋಗ್ಯ ಇರುತ್ತದೋ, ದೇವರ ಪುಸ್ತಕ, ದೇವರ ವಸ್ತುಗಳು ಅಥವಾ ದೇವರ ಪ್ರಾರ್ಥನೆ ಇರುವುದಿಲ್ಲವೋ ಅಂತಹ ಜಾಗದಲ್ಲಿ ನನ್ನ ವಾಸವಿರುತ್ತದೆ" ಎಂದು ಉದ್ಧಾಲಕ ಋಷಿಗೆ ಜ್ಯೇಷ್ಠಾದೇವಿಯು ಹೇಳಿದಳು. ಜ್ಯೇಷ್ಠಾಲಕ್ಷ್ಮಿಯನ್ನು ಅಲಕ್ಷ್ಮಿ ಎಂದೂ ಕರೆಯುತ್ತಾರೆ. ಆಕೆ ಉದ್ಧಾಲಕ ಋಷಿಯ ಪತ್ನಿ. ದೇವರ ಪೂಜೆ ಮಾಡದಿರುವುದು, ಸುಳ್ಳು ಹೇಳುವುದು ಹಣೆಗೆ ಕುಂಕುಮ ಇಡದೆ ಇರುವುದು, ತಲೆ ಬಿರಿ ಹಾಕಿರುವುದು ದರಿದ್ರದ ಲಕ್ಷಣ, ಒದ್ದೆ ಬಟ್ಟೆ ಮೈಮೇಲೆ ಹಾಕುವುದರಿಂದ ಬೆನ್ನಿನ ಮೂಳೆಗೆ ತೊಂದರೆ ಆಗುವುದು, ಹರಿದ ಬಟ್ಟೆ, ಒಗೆಯದಿರುವ ಬಟ್ಟೆಯನ್ನು ಹಾಕದಿರುವುದರಿಂದ ದರಿದ್ರ ಬರುತ್ತದೆ. ಹೊರಗಿನಿಂದ ಒಳಗೆ ಬಂದಾಗ ಕಾಲು ತೊಳೆಯಬೇಕು. ಇಲ್ಲದಿದ್ದರೆ ಹಿಮ್ಮಡಿಯಲ್ಲಿ ಜ್ಯೇಷ್ಠಾಲಕ್ಷ್ಮಿ ಸೇರಿಕೊಳ್ಳುತ್ತಾಳೆ. ಕೆಳಗೆ ಕುಳಿತು ಊಟ ಮಾಡುವುದರಿಂದ ಆರೋಗ್ಯ ತಾಂಡವವಾಡುತ್ತದೆ.

ಜ್ಯೇಷ್ಠಾದೇವಿಯು ತಾನು ನೆಲೆಸುವ ಸ್ಥಳ ಕೇಳಿದಾಗ, ಯಾರೂ ಒಪ್ಪದಿದ್ದಾಗ ಕಾಮಧೇನುವು ತನ್ನ ಹಿಂಭಾಗದಲ್ಲಿ ಜಾಗ ನೀಡಿತು. ಮುನ್ನೂರು ಮೂವತ್ತು ಮೂರು ಕೋಟಿ ದೇವತೆಯರು ಕಾಮಧೇನುವಿನಲ್ಲಿ ನೆಲೆಸಿರುತ್ತಾರೆ. ಆದ್ದರಿಂದ ಜ್ಯೇಷ್ಠಾದೇವಿಗೆ ಹಿಂಭಾಗದಲ್ಲಿ ಸ್ಥಳ ದೊರಕಿತು. ಇದಕ್ಕಾಗಿಯೇ ಗೋವನ್ನು ಕಂಡಾಗ ಅದರ ಹಿಂಭಾಗವನ್ನು ಮುಟ್ಟಿ ನಮಸಿ, ತಮಗೆ ಅಂಟಿರುವ ದರಿದ್ರವನ್ನು ಹೋಗಲಾಡಿಸುವಂತೆ ಕೇಳಿಕೊಳ್ಳುತ್ತಾರೆ.

✍ **ಕೆ.ಎಲ್. ಶಾಂತಾ**

# !!! ಕರ್ತವ್ಯವೋ – ತ್ಯಾಗವೋ !!!



ನಾವು ಹುಟ್ಟಿದ ಸಮಯ, ದಿನ, ವಾರ ನಮಗೆ ಸ್ವತಃ ಅರಿವಿಲ್ಲದ್ದು. ಅವೇನಿದ್ದರೂ ತಂದೆ ತಾಯಂದಿರಿಂದ ತಿಳಿದುಕೊಂಡ ವಿವರಗಳಾದರೂ, ಅದೇ ಸತ್ಯ. ಇನ್ನು ನಮ್ಮ ಬಾಲ್ಯದ ಪ್ರಾರಂಭದ ದಿನಗಳ ಆಟ ಪಾಠಗಳು, ಚಟುವಟಿಕೆಗಳು ನಮಗೆ ನೆನಪಿರುವ ಸಾಧ್ಯತೆ ವಿರಳ. ಆ ದಿನಗಳ ಬಗ್ಗೆ ಮುಂದೊಂದು ದಿನ ನಾವು ಅಪ್ಪ ಅಮ್ಮಂದಿರು ಜೊತೆಗೂಡಿ ಹಂಚಿಕೊಂಡಾಗ ಮನಸ್ಸಿಗೆ ಏನೋ ಉಲ್ಲಾಸ, ಯಾವುದೋ ಸಾಧನೆ ಮಾಡಿದಂತಹ ಕಲ್ಪನೆ.

ಹೌದಾ, ಹಾಗಾ, ನಿಜಾನ, ನಾನು ಹಾಗೆಲ್ಲಾ ಮಾಡ್ತಾ ಇದ್ನಾ...? ಎಂಬ ಹೆಚ್ಚು ಪ್ರತಿಕ್ರಿಯೆಸಲಾಗದ, ಬರೀ ಹೂ ಗುಟ್ಟುವ ಮೌನ ಮಾತ್ರ. ತಂದೆ ತಾಯಿಗಳಿಗೂ ಸಹ ತಮ್ಮ ಮಕ್ಕಳೊಂದಿಗೆ, ನಮ್ಮ ಆ ಬಾಲ್ಯದ ದಿನಗಳ ಬಗ್ಗೆ ಮೆಲುಕು ಹಾಕಿ ಹಂಚಿಕೊಳ್ಳುವುದರಲ್ಲಿ ಅದೇನೋ ಹೇಳತೀರದ ತೃಪ್ತಿ. ಮಕ್ಕಳಿಗೆ ಬಾಲ್ಯದಲ್ಲಿ 'ಶ್ರೀ ಕೃಷ್ಣನ' ವೇಶದ ಅಲಂಕಾರ ಮಾಡಿ,ಜುಟ್ಟಿಗೆ ಮಲ್ಲಿಗೆ ಹೂವಿನ ಕೊಂಡೆ ಕಟ್ಟಿ, ಕೈಯಲ್ಲಿ ಕೊಳಲು ಕೊಟ್ಟು ತೆಗೆಸಿದ ಫೋಟೋವನ್ನು ತಂದು, ತನ್ನ ಸೀರೆಯ ಅಂಚಿನಿಂದ ಆ ಚಿತ್ರಪಟವನ್ನು ಒಮ್ಮೆ ನಯವಾಗಿ ಒರೆಸಿ, ನಮ್ಮ ಮುಂದೆ ಹಿಡಿಯುವ ಆ ಕ್ಷಣದಲ್ಲಿ, ನಮಗೆ ಅರಿವೇ ಇಲ್ಲದೆ ಕಣ್ಣಂಚಿನಿಂದ ಹೊರಳುವ ಸಂತಸದ ಮೌನ ಕಣ್ಣೀರ ಹನಿಗಳೇ ಅದಕ್ಕೆ ಪ್ರತಿ ಉತ್ತರ. ಆ ಕ್ಷಣದಲ್ಲಿ ತಾಯಂದಿರಿಗೆ ಆಗುವ ಅನನ್ಯ ಆನಂದ ಹೇಳತೀರದು.

ನಾವು ತಾಯಿಯ ಗರ್ಭದಲ್ಲಿದ್ದಾಗ ಮತ್ತು ಹೊರ ಜಗತ್ತಿಗೆ ಪ್ರವೇಶಿಸಿದ ದಿನಗಳಲ್ಲಿ, ಮಕ್ಕಳ ಆರೋಗ್ಯಕರ ಬೆಳವಣಿಗೆಗಾಗಿ, ತಾಯಂದಿರು ತಮ್ಮ ದೇಹಕ್ಕೆ ಸಮಯೋಚಿತ ಆರೈಕೆ ಮಾಡಿಕೊಂಡರೂ, ಅದು ತನ್ನ ಕಂದಮ್ಮನ ಆರೋಗ್ಯಕರ ಬೆಳವಣಿಗೆಗಾಗಿ ಎಂಬ ಸತ್ಯದ ಅರಿವು ಅಗತ್ಯ. ತಾಯಂದಿರ ಈ ಪ್ರಕ್ರಿಯೆಗಳು ಸಾಮಾನ್ಯವಾಗಿ ಅಗೋಚರ ದಿನಚರಿಯಂತೆ ನಡೆದುಕೊಂಡು ಹೋಗುವಂತಹ ಚಟುವಟಿಕೆಗಳು. ಹಾಗಾಗಿ ಇವುಗಳ ಬಗ್ಗೆ ಯಾರೂ ಹೆಚ್ಚಾಗಿ ತಲೆ ಕೆಡಿಸಿ ಕೊಂಡಂತೆ ಕಾಣದಿರುವುದು ಸಹಜವೇ. ಇನ್ನು ಪ್ರಾರಂಭಿಕ ಹಂತ ಕಳೆದು ಶಾಲೆಗೆ ಹೋಗುವ ದಿನಗಳು ಬಂದಾಗ, ತಾಯಿ ತಂದೆಯರ ಸಡಗರ, ಆತಂಕ, ಎಚ್ಚರಿಕೆಗಳು ಹೇಳತೀರದು. ಹೀಗೆ ಹಂತ ಹಂತವಾಗಿ ತಂದೆ ತಾಯಂದಿರು ತಮ್ಮ ಮಕ್ಕಳಿಗಾಗಿ ತಮ್ಮ ಸರ್ವಸ್ವವನ್ನೂ ಧಾರೆ ಎರೆದು, ತ್ಯಾಗ ಮಾಡಿದ ಅರಿವು ನಮಗಿದ್ದರೂ, ತಾಯಿ ತಂದೆಯರಿಗೆ ಅವರ ವೃದ್ಧಾಪ್ಯದಲ್ಲಿ ಅವರಿಗೆ ವೃದ್ಧಾಶ್ರಮ ಗಳನ್ನು ಪರಿಚಯಿಸುವ ಪ್ರಯತ್ನಗಳು ಹೆಚ್ಚುತ್ತಿರುವುದು ವಿಷಾದನೀಯ. ತಮ್ಮ ಸರ್ವಸ್ವವನ್ನೂ ಮಕ್ಕಳ ಅಭಿವೃದ್ಧಿ, ಏಳಿಗೆಗಾಗಿ ತ್ಯಾಗ ಮಾಡಿದ ತಂದೆ ತಾಯಿಗಳಿಗೆ ತಮ್ಮ ಸಂಧ್ಯಾಕಾಲವನ್ನು, ಮಕ್ಕಳೊಂದಿಗೆ ಕಳೆದು ಪ್ರೀತಿ, ವಾತ್ಸಲ್ಯ, ಮಮತೆ, ಕಷ್ಟ ಸುಖ ಸಂತೋಷಗಳನ್ನು ಮಕ್ಕಳೊಂದಿಗೆ ಹಂಚಿಕೊಳ್ಳುವ ವಾತಾವರಣ ನಮ್ಮ ಸಮಾಜದಲ್ಲಿ ದೊರಕಬೇಕಲ್ಲವೆ...? ತಂದೆ ತಾಯಂದಿರ ಈ ಪ್ರೀತಿ, ವಿಶ್ವಾಸ, ಕಷ್ಟ ಸುಖದ ದಿನಗಳು ನಮ್ಮ ದೃಷ್ಟಿಯಲ್ಲಿ 'ತ್ಯಾಗ' ಎಂದೆನಿಸದೆ, ಕೇವಲ 'ಕರ್ತವ್ಯ' ಎಂದೆನಿಸುವುದು ಎಷ್ಟರಮಟ್ಟಿಗೆ ಸಮಂಜಸ...? ಈ ಬಗ್ಗೆ ಆಲೋಚನೆ, ಮನಮಂಥನದ ಅಗತ್ಯವಿದೆ. ಜೀವನವನ್ನು ತಂದೆ ತಾಯಿಯರೊಂದಿಗೆ ಸುಖಮಯವಾಗಿ ಕಳೆಯುವ ಪದ್ಧತಿ ನಿರಂತರವಾಗಿ ಉಳಿಯಲಿ.

ಅನಾಥಾಶ್ರಮಗಳಲ್ಲಿ ಕಡು ಬಡತನದ ಹಾಗು ದಿಕ್ಕುಕಾಣದ ಮಕ್ಕಳನ್ನು ಕಾಣುವುದು ಸಹಜ, ಆದರೆ ನಮ್ಮ ತಂದೆ ತಾಯಂದಿರು, ಅವರ ವೃದ್ಧಾಪ್ಯದ ದಿನಗಳು ವೃದ್ಧಾಶ್ರಮಗಳಲ್ಲಿ ಕಳೆಯುವ ಪರಿಸ್ಥಿತಿ ನಿರ್ಮಾಣವಾಗದಿರಲಿ.

ನಮ್ಮ ಬಾಳಲ್ಲಿ ಸಂಗಾತಿಯ ಪ್ರವೇಶ ಆದೊಡನೆ, ನಮ್ಮನ್ನು ಹೆತ್ತು, ಬೆಳಸಲು ತನ್ನ ದೇಹದ ಸೌಂದರ್ಯ, ಆರೋಗ್ಯವನ್ನು ಮುಡುಪಿಟ್ಟ ತಾಯಿಯನ್ನಾಗಲಿ ಅಥವ ನಮ್ಮ ಅಭಿವೃದ್ಧಿಗಾಗಿ ತನ್ನ

# ಸುದ್ದಿ ಮನೆ

## ನಾಮಕರಣ

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಅನಂತ ರವರು ತಮ್ಮ ದ್ವಿತೀಯ ಪುತ್ರಿ ಸಾನ್ವಿ ಅನಂತ್ ನಾಮಕರಣವನ್ನು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಪ್ರಥಮ ಪುತ್ರಿ ನಿತ್ಯಶ್ರೀ ಅನಂತ್ 5ನೇ ಹುಟ್ಟುಹಬ್ಬವನ್ನು ಆಚರಿಸಿದರು.

## ವಿವಾಹ

1. ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಎ.ವಿ. ಮಂಜುನಾಥ್ ಹಾಗೂ ಶ್ರೀಮತಿ ಶುಭಾರವರ ಪುತ್ರ ಚಿ. ಎ.ಎಮ್. ಅವಿನಾಶ್‌ರವರ ವಿವಾಹವು ಚಿ.ಸೌ. ರಾಗಿಣಿ ಅವರೊಂದಿಗೆ 16.05.2016ರಂದು ಬೆಂಗಳೂರಿನಲ್ಲಿ ನಡೆಯಿತು.

* * *

2. ಸಂಘದ ಹಿರಿಯ ಸದಸ್ಯರಾದ ಭಗವಾನ್ ರಾಜಾಪುರ್ ರವರ ಸಹೋದರನ ಪುತ್ರ ಚಿ. ದೀಪಕ್ ಶ್ರೀಧರ್ ರಾಜಪುರ್ ರವರ ವಿವಾಹವು ಚಿ.ಸೌ. ಎಂ.ಬಿ. ಧೃತಿಯವರೊಂದಿಗೆ ತಾ. 9.5.2016 ರಂದು ಮೈಸೂರಿನಲ್ಲಿ ನಡೆಯಿತು.

* * *

3. ಸಂಘದ ಹಿರಿಯ ಸದಸ್ಯ ಶ್ರೀ ಕೆ.ವಿ. ರಾಧಾಕೃಷ್ಣನ್‌ರವರ ಮೊಮ್ಮಗಳು ಚಿ.ಸೌ. ಸುಪ್ರಿಯಾರವರ ವಿವಾಹವು ಚಿ. ರಾಜಾ ರಾಮನ್‌ರವರೊಂದಿಗೆ 26.05.2016ರಂದು (ಶ್ರೀಮತಿ ಲಕ್ಷ್ಮೀ ಮತ್ತು ಶ್ರೀ ಗುರುಪ್ರಸಾದ್‌ರವರ ಪುತ್ರ) ಬೆಂಗಳೂರಿನಲ್ಲಿ ನೆರವೇರಿತು.

* * *

4. ಸಂಘದ ಸದಸ್ಯೆ ಶ್ರೀಮತಿ ಮೀರಾ ಕೃಷ್ಣಮೂರ್ತಿಯವರ ಅಣ್ಣನ ಮಗ ಶ್ರೀ ಕೃಷ್ಣ (ಇಬ್ಬರೂ ಡಾ. ಡಿ.ವಿ. ಗುಂಡಪ್ಪನವರ ಮೊಮ್ಮಕ್ಕಳು) ಶ್ರೀಮತಿ ಸರಸ್ವತಿ ಪುತ್ರ ಚಿ. ರಾಹುಲ್ ಅವರ ವಿವಾಹವು ಚಿ. ಲಕ್ಷ್ಮೀ ಅವರೊಂದಿಗೆ ತಾ. 22.04.2016ರಂದು ಬೆಂಗಳೂರಿನಲ್ಲಿ ನೆರವೇರಿತು.

## ಉಪನಯನ

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಗಣೇಶ್ ಶ್ರೀಧರ್ ಹಾಗೂ ಶ್ರೀಮತಿ ರೂಪಶ್ರೀರವರ ಪುತ್ರ ಚಿ. ಅಭಯ್ ಗಣೇಶನ ಬ್ರಹ್ಮೋಪದೇಶವು ತಾ. 17.4.2016ರಂದು ಬೆಂಗಳೂರಿನಲ್ಲಿ ನಡೆಯಿತು.

* * *

ಸಂಘದ ಸದಸ್ಯೆ ಶ್ರೀಮತಿ ನಳಿನಿ ತ್ಯಾಗರಾಜನ್‌ರವರ ಅಣ್ಣನ ಮಗನಾದ ಚಿ. ಅಭಿಷೇಕ್‌ನ (ಶ್ರೀಮತಿ ಜಯಶ್ರೀ ಮತ್ತು ಶ್ರೀ ಮಹೇಶ್‌ರವರ ಪುತ್ರ) ಉಪನಯನವು ತಾ. 27.6.2016ರಂದು ಬೆಂಗಳೂರಿನಲ್ಲಿ ನೆರವೇರಿತು.

* * *

ಶ್ರೀಮತಿ ಮೈತ್ರೇಯಿ ಮತ್ತು ಶ್ರೀ ರವಿ ಇವರ ಸುಪುತ್ರ ಚಿ. ಅನ್ವ್ ರವಿ ಕಶ್ಯಪ್‌ನ ಉಪನಯನವು ದಿನಾಂಕ 08.05.2016ರಂದು ಬೆಂಗಳೂರಿನಲ್ಲಿ ನೆರವೇರಿತು.

ನಮ್ಮವರು

# ಕಿಟ್ಟಿ ಮಾಸ್ಟರ್

**ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ।**
**ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥** ಭ (3–21)

ಶ್ರೀಯುತ ಎನ್. ಕೃಷ್ಣಸ್ವಾಮಿಯವರು ಜುಲೈ 30, 1926ರಂದು ಬೆಂಗಳೂರಿನಲ್ಲಿ ಅಡ್ವೋಕೇಟ್ ಸೇಲಂ ನಂಜುಂಡಯ್ಯ ಮತ್ತು ಶಾರದಮ್ಮ ದಂಪತಿಗಳಿಗೆ 4ನೇ ಮಗುವಾಗಿ ಜನಿಸಿದರು. ದೈವಭಕ್ತ ಕುಟುಂಬದ ತಾಯಿ ತಂದೆಗಳಂತೆ ಮಕ್ಕಳೂ ಸರಳ, ನಿರ್ಮಲ, ಕಷ್ಟ ಜೀವನವನ್ನು ಹಸನ್ಮುಖದಿಂದ ಸ್ವೀಕರಿಸುವ ಪ್ರವೃತ್ತಿಯವರು.

ಕೃಷ್ಣಸ್ವಾಮಿ ಬಾಲ್ಯದಿಂದಲೂ ಪ್ರತಿಭಾವಂತರು. ವಿದ್ಯಾರ್ಥಿ ದೆಸೆಯಲ್ಲಿಯೇ ರಾಮಕೃಷ್ಣ, ವಿವೇಕಾನಂದರ ಪ್ರಭಾವಕ್ಕೆ ಬಂದು ಅವರು ತಮ್ಮ ಗಾಯನದಿಂದ, ಸದ್ಗುಣಗಳಿಂದ ಎಲ್ಲರ ಕಣ್ಮಣಿಯಾಗಿದ್ದರು. ಬಡತನವಿದ್ದರೂ, ಯಾವಾಗಲೂ 'ವಿಶೇಷ ಯೋಗ್ಯತೆ'ಯಲ್ಲಿ ಅವರು ಶಾಲಾ ವಿದ್ಯಾಭ್ಯಾಸವನ್ನು ಮುಗಿಸಿ, ನಂತರ ಸೆಂಟ್ರಲ್ ಕಾಲೇಜಿನಲ್ಲಿ ಎಂ.ಎಸ್ಸಿ ಪದವಿಯನ್ನು ಪಡೆದರು. ಇದೇ ಸಮಯದಲ್ಲಿ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು. ನಂತರ ವಿಜಯ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ ಶ್ರೀಯುತರು ಸಂಶೋಧನೆಯಲ್ಲಿ ಒಲವು ತೋರಿ, ಮಾನಸಿಕ ಆಸ್ಪತ್ರೆ (ನಿಮ್ಹಾನ್ಸ್)ನಲ್ಲಿ ವಿಜ್ಞಾನಿಯಾಗಿ, ವಿದ್ಯುನ್ಮಾನ ವೈದ್ಯಕೀಯ ವಿಭಾಗದಲ್ಲಿ ಸಂಶೋಧನ ಕಾರ್ಯ ಮಾಡಿದರು. ಮುಂದೆ ಅದೇ ಕ್ಷೇತ್ರದಲ್ಲಿ ರಕ್ಷಣಾ ಇಲಾಖೆಯನ್ನು ಪ್ರವೇಶಿಸಿ LRDE, DIPAS ಮುಂತಾದೆಡೆ ಕೆಲಸ ಮಾಡಿ ಕಡೆಯಲ್ಲಿ ಮತ್ತೆ ರಕ್ಷಣಾ ಇಲಾಖೆಯ ಶಿಕ್ಷಣ ಕ್ಷೇತ್ರಕ್ಕೆ ಬಂದು ಪುಣೆಯಲ್ಲಿ ಮಿಲಿಟರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ಸ್ವಯಂ ನಿವೃತ್ತಿ ಹೊಂದಿ 1982ರಲ್ಲಿ ಬೆಂಗಳೂರಿಗೆ ಹಿಂತಿರುಗಿದರು.

ಈ ವಿಜ್ಞಾನಿ–ಪ್ರಾಧ್ಯಾಪಕರು ಕೆಲಸ ಮಾಡಿದೆಡೆಯಲ್ಲೆಲ್ಲಾ ಸೃಜನಶೀಲತೆ, ಶ್ರದ್ಧೆ, ಶಿಸ್ತು ಮತ್ತು ಸಹೋದ್ಯೋಗಿಗಳೊಡನೆ ಗೌರವ ವಿಶ್ವಾಸಗಳು ಎದ್ದು ಕಾಣುತ್ತಿದ್ದವು. ಹಾಗೆಯೇ ಮನೆಯಲ್ಲಿಯೂ ಎಲ್ಲರಿಗೂ ಅಚ್ಚು ಮೆಚ್ಚಾಗಿ, ಕಿರಿಯರಿಗೆ ಗುರುವಾಗಿ, ಹಿರಿಯರಿಂದಲೂ ಗೌರವಿಸಲ್ಪಟ್ಟು ಇವರಲ್ಲಿ ನಿರ್ಲಿಪ್ತತೆ, ಕಳಕಳಿ, ಸಾಮರಸ್ಯಗಳು ಎದ್ದು ಕಾಣುತ್ತದೆ. ಶ್ರೀಯುತರದು ಸತ್ಯ ನಿಷ್ಠೆಯ, ಪ್ರೇಮದ, ಕಾರ್ಯ ಶೀಲತೆಯ ಸಾಧನೆಯ ಜೀವನ, ಶ್ರೀ ರಾಮಕೃಷ್ಣ ಆಶ್ರಮದ ಭಕ್ತರಾಗಿ, ಆ ಹಿನ್ನೆಲೆಯನ್ನು ಹೊಂದಿ, ವಿವೇಕಾನಂದ ಬಾಲಕ ಸಂಘದಲ್ಲಿ, ಆಶ್ರಮದ ಇತರ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ, 'ಕಿಟ್ಟಿ ಮಾಸ್ತರು' ಎಂದೇ ಹೆಸರು ಪಡೆದರು. ಇತರ ಸೇವಾ ಸಂಸ್ಥೆಗಳಲ್ಲಿಯೂ ಅವುಗಳ ಬೆಳವಣಿಗೆಯಲ್ಲಿ ಸಕ್ರಿಯ ಪಾತ್ರವಹಿಸಿ, ಉತ್ತಮ ಕಾರ್ಯನಿರ್ವಹಿಸಲು ಕಾರಣರಾಗಿದ್ದಾರೆ. ಭಜನೆ, ಕೀರ್ತನೆಗಳು, ಕಿಟ್ಟಿ ಮಾಸ್ತರರಿಗೆ ಜೀವನದ ಉಸಿರು. ಕೀರ್ತನೆಗಳನ್ನು ಹೇಳಿಕೊಡುವುದಲ್ಲದೆ, ಯಾರು ಆಹ್ವಾನಿಸಿ ಕರೆದರೂ, ಅಲ್ಲಿಗೆ ತಮ್ಮ ವೃಂದದೊಡನೆ ಹೋಗಿ ಭಕ್ತಿಯಿಂದ ಭಜನೆ ನಡೆಸಿಕೊಡುತ್ತಾರೆ. ಇಂದಿಗೂ ಎತ್ತರದ ದನಿಯಲ್ಲಿ ತನ್ಮಯತೆಯಿಂದ ಹಾಡುತ್ತಾರೆ. ತಾವೇ ಹಾಡುಗಳನ್ನು ರಚಿಸಿದ್ದಾರೆ. ಮಹಾತ್ಮಾಗಾಂಧಿ, ವಿನೋಬಾ ಮೊದಲಾದ ಮಹಾತ್ಮರು, ಐನ್‌ಸ್ಟೀನ್‌ನಂತಹ ವಿಜ್ಞಾನಿಗಳು – ಹೀಗೆ ವಿಶಾಲ ಸಾಹಿತ್ಯ ಆಸಕ್ತಿ ಯಿಂದ ಪುಸ್ತಕಗಳನ್ನು ಬರೆದಿದ್ದಾರೆ.



ಒಂದು ವಿಶೇಷವೆಂದರೆ ಕೃಷ್ಣಮೂರ್ತಿಗಳು ಮಾಡಿದ 'ಪ್ರಾರ್ಥನಾ ಪ್ರವಾಸ' ಒಂದಲ್ಲ ನಾಲ್ಕು ಬಾರಿ ಅವರು ಅಮೆರಿಕಾಕ್ಕೆ ಹೋಗಿ ವಿವೇಕಾನಂದ ಶಾಲೆಯ ಕಟ್ಟಡ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಪ್ರಾರ್ಥನೆ, ಕೀರ್ತನೆಗಳನ್ನು ಹಾಡಿ ನಿಧಿ ಸಂಗ್ರಹ ಮಾಡಿದರು. ಅಂದಿನ ಅಧ್ಯಕ್ಷರಾಗಿದ್ದ ಡಾ. ಹಿ.ಎಸ್. ನಾರಾಯಣರಾಯರು ಈ ಕಟ್ಟಡದ ಪ್ರತಿ ಕಲ್ಲಿನ ಹಿಂದೆ ಒಂದು ಹಾಡು ಇದೆ ಎಂದು ಹೇಳಿದ್ದಾರೆ.

ಬಂಧು–ಬಳಗದವರು, ಬಾಲಕ ಸಂಘ, ಆಶ್ರಮದ ಭಕ್ತರು, ವಿವೇಕಾನಂದ ಶಾಲೆ, ಸೇವಾಶ್ರಮದ ಸ್ನೇಹಿತರು, ಗಾಂಧಿಭವನ, ಭಾರತೀಯ ವಿದ್ಯಾಭವನ, ಗಾಂಧಿ ಅಧ್ಯಯನ ಕೇಂದ್ರದ ಮಿತ್ರರು, ಸ್ನೇಹಿತರಾದ ಸಮುದಾಯದ ಸಹೃದಯರು ವಿಶೇಷ ವ್ಯಕ್ತಿತ್ವದ ಶ್ರೀಯುತ ಕೃಷ್ಣಮೂರ್ತಿಗಳ ಒಡನಾಟವನ್ನು ಸದಾ ಸ್ಮರಿಸುತ್ತಿರುತ್ತಾರೆ. 'ಸಂತರು ವಸಂತ ಋತುವಿನಂತೆ ಭೂಮಿಗೆ ಬರುತ್ತಾರೆ' ಎಂಬುದು ಆದಿಗುರು ಶ್ರೀ ಶಂಕರಾಚಾರ್ಯರ ವಾಕ್ಯ. ಇತರರಿಗೆ ಒಳ್ಳೆಯದನ್ನು ಮಾಡುವುದೇ ಅವರ ಗುರಿ. ಇದು ನಮ್ಮ ಕಿಟ್ಟಿ ಮಾಸ್ತರಿಗೆ ಬಹಳ ಚೆನ್ನಾಗಿ ಒಪ್ಪುತ್ತದೆ.

ಮುಂಜಾನೆಯ ಮಂಜಿನ ಹನಿಯು ಯಾವ ಸದ್ದು ಗದ್ದಲವಿಲ್ಲದೆ ಚೆಂದದ ಗುಲಾಬಿಯನ್ನು ಅರಳಿಸುವಂತೆ ನಮ್ಮೊಡನಿದ್ದು, ಎಲ್ಲರನ್ನೂ ಆತ್ಮಭಾವನೆಯಿಂದ ಕಾಣುತ್ತಾ, ಸಾರ್ಥಕ ಜೀವನ ನಡೆಸುತ್ತಿರುವ ಶ್ರೀಯುತರು ಈಗ 90 ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಧನ್ಯ ಜೀವಿಯ ಪರಿಚಯ ಮಾಡಿಕೊಡುವುದು ಹೆಮ್ಮೆ ಎನಿಸುತ್ತದೆ. ತಮ್ಮ ತನು ಮನ ಧನವನ್ನು ಸೇವಾ ಸಂಸ್ಥೆಗಳಿಗಾಗಿ ಅರ್ಪಿಸುತ್ತಿರುವ ಶ್ರೀಯುತರು ನಮ್ಮ ಸಮುದಾಯದ ಮುಂದಿನ ಪೀಳಿಗೆಗೆ ದಾರಿದೀಪ ಮತ್ತು ಮಾರ್ಗದರ್ಶಕರಾಗಿದ್ದಾರೆ.

ಪದ್ಮಜ

## ಒಗಟುಗಳು

1. ನನ್ನಯ ಹೊಟ್ಟೆಗೆ ಕೈ ಹಾಕಿದರೆ ನಾನು ಬಾಯನು ಬಿಡ್ತೇನೆ. ಎಲ್ಲಿ ಹೋದರೂ ನಿಮ್ಮಯ ಮನೆಗೆ ನಾನು ರಕ್ಷಣೆ ಕೊಡ್ತೇನೆ.
2. ಕೋಟೆ ಒಡೆದಾಗ ಕವಡೆ ಸಿಕ್ತು, ಕವಡೆ ಒಡೆದಾಗ ನೀರು ಸಿಕ್ತು.
3. ಬಿಸಿಲಲ್ಲಿ ನಾ ಒಣಗುವೆನು, ಬಿಸಿಯ ಕೊಳಕ್ಕೆ ಬೀಳುವೆನು, ಬೆಳ್ಳಗೆ ಬೆಳ್ಳಗೆ ಅರಳುವೆನು, ಕುರು ಕುರು ಎಂದು ಸೊರಗುವೆನು.
4. ನೆಟ್ಟರೆ ನಾನು ಬೆಳೆಯುವುದಿಲ್ಲ, ಕಿತ್ತರೆ ನಾನು ಬಾಡುವುದಿಲ್ಲ. ಬೆಳೆಯಲು ನೀರು ಬೇಕಾಗಿಲ್ಲ. ನಾನಾರೆಂದು ಹೇಳೆಲೋ ಮೆಲ್ಲ
5. ನೀರಿನಲ್ಲಿ ನಾ ಜನಿಸುವೆನು, ನೀರಲ್ಲಿಯೇ ನಾ ಬೆಳೆಯುವೆನು, ಊರಿಗೆ ನಾನು ತೆರಳುವೆನು. ಗಂಟಲು ಹರಿವೊಲು ಚೀರುವೆನು.

**ಸಂಜನ ಶೈಲೇಶ್**

ಉತ್ತರ : 1. ಬೀಗ, 2. ತೆಂಗಿನಕಾಯಿ, 3. ಸಂಡಿಗೆ, 4. ಕೂದಲು, 5.ಶಂಖ

# ನೆನಪಿನಂಗಳದಲ್ಲಿ ಚಿತ್ರಗಳು : 24, 25



ಕಾಚರಕನಹಳ್ಳಿ ದಾಸಪ್ಪನವರ ಕುಟುಂಬ (ಸತ್ಯಮೂರ್ತಿಯವರ ಮದುವೆ ಸಮಾರಂಭ) 28.11.1975
ಕೃಪೆ : ಕೆ.ಜಿ. ವೆಂಕಟೇಶ್



ಅಟ್ಟೂರು ರಾಮಶರ್ಮ ಕುಟುಂಬ (ಶ್ರೀಮತಿ ಗೀತಾರವರ ಮದುವೆ ಸಮಾರಂಭ) 1980
ಕೃಪೆ : ರಾಮಕೃಷ್ಣ ಶರ್ಮಾ



# ಅಡುಗೆ ಕಟ್ಟೆ

## ಮಂಗಳೂರು ಬೋಂಡ

### ಬೇಕಾಗುವ ಪದಾರ್ಥಗಳು

ಮೈದಾ ಹಿಟ್ಟು : 1 ಕಪ್ಪು, ಅಕ್ಕಿ ಹಿಟ್ಟು : 1 ಕಪ್ಪು, ಹಸಿ ಮೆಣಸಿನ ಕಾಯಿ, ಕರಿಬೇವು, ಕೊತ್ತಂಬರಿಸೊಪ್ಪು, ಸಕ್ಕರೆ, ಮೊಸರು, ಎಣ್ಣೆ, ಉಪ್ಪು.

**ಮಾಡುವ ವಿಧಾನ :** ಮೈದಾಹಿಟ್ಟು, ಅಕ್ಕಿ ಹಿಟ್ಟು ಬೆರೆಸಿಕೊಳ್ಳಿ, ಹಸಿ ಮೆಣಸಿನಕಾಯಿ, ಕರಿಬೇವು, ಕೊತ್ತಂಬರಿ ಸೊಪ್ಪು ಹಾಕಿ, 2 ಚಮಚ ಮೊಸರು, ಸ್ವಲ್ಪ ಸಕ್ಕರೆ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಕಲಸಿಕೊಳ್ಳಿ. ಸ್ವಲ್ಪ ನೀರನ್ನು ಉಪಯೋಗಿಸಿ. ನಂತರ ಕಾದ ಎಣ್ಣೆಯಲ್ಲಿ ಕರಿಯಿರಿ. ಕಂದು ಬಣ್ಣ ಬರುವ ತನಕ ಕರಿಯಬೇಕು. ಮಂಗಳೂರು ಬೋಂಡ ರೆಡಿ. ಇದು ಕಾಯಿ ಚಟ್ನಿಯ ಜೊತೆ ತಿನ್ನಲು ರುಚಿಕರವಾಗಿರುತ್ತದೆ.

## ಮಾಟವಾಡಿ ಪಲ್ಯ

### ಬೇಕಾಗುವ ಪದಾರ್ಥಗಳು

ತೊಗರಿಬೇಳೆ/ಕಡಲೆಬೇಳೆ, ಹಸಿ ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಹಿಂಗು, ಅರಿಶಿನ, ಉಪ್ಪು, ಸಾಸಿವೆ, ಎಣ್ಣೆ, ಜೀರಿಗೆ,

**ತರಕಾರಿಗಳು :** ಗೋರಿಕಾಯಿ, ಹುರಳಿಕಾಯಿ, ಮೆಂತ್ಯ ಸೊಪ್ಪು, ಹಸಿಬಟಾಣಿ, ಎಲೆಕೋಸು, ಬಾಳೆಕಾಯಿ

**ವಿ.ಸೂ. :** ಬೇಳೆಗಳನ್ನು ಎರಡು ಗಂಟೆಗಳ ಕಾಲ ನೀರಿನಲ್ಲಿ ನೆನೆಸಬೇಕು. ತರಕಾರಿಯನ್ನು ಬೇಯಿಸಿಕೊಳ್ಳಬೇಕು.

**ಮಾಡುವ ವಿಧಾನ :** ನೆಂದಿರುವ ಬೇಳೆಯ ಜೊತೆ, ಹಸಿ ಮೆಣಸಿನ ಕಾಯಿ, ಕೊತ್ತಂಬರಿ ಸೊಪ್ಪು, ಅರಿಶಿನ, ಉಪ್ಪು, ಜೀರಿಗೆ, ಹಿಂಗು, ಹಸಿ ಕೊಬ್ಬರಿ, ಮಿಕ್ಸಿ ಜಾರಿಗೆ ಹಾಕಿ ಗಟ್ಟಿಯಾಗಿ ರುಬ್ಬಿಕೊಳ್ಳಿ. ನಂತರ ಒಲೆಯ ಮೇಲೆ ಬಾಣಲೆಯನ್ನು ಇಟ್ಟು ಎಣ್ಣೆ ಹಾಕಿ ಅದು ಕಾದ ನಂತರ ಸಾಸಿವೆ ಹಾಕಿ. ನಂತರ ಬೆಂದ ತರಕಾರಿ, ರುಬ್ಬಿದ ಮಸಾಲೆ ಹಾಕಿ ಚೆನ್ನಾಗಿ ಹುರಿಯಿರಿ. ಗಟ್ಟಿಯಾಗಿ ಬಂದ ನಂತರ ಕೆಳಗಿಳಿಸಿರಿ. ಇದು ಚಪಾತಿಯ ಜೊತೆ ಚೆನ್ನಾಗಿರುತ್ತದೆ. ಅನ್ನ ಮತ್ತು ದೋಸೆಗೂ ಉಪಯೋಗಿಸಬಹುದು.



■ ವಿಜಯಲಕ್ಷ್ಮಿ ಶ್ರೀಕಂಠಯ್ಯ

# ಗುರುವರ ಭಕ್ತಿಗೀತೆ

**ಗುರುವರ ಶಂಕರ ಪರಾತ್ಪರ**
**ಶಂಕರ ಶುಭಕರ ಜ್ಞಾನೇಶ್ವರ ॥ಪ॥**

**ಧರ್ಮ ಸಂಸ್ಥಾಪಕ ಗುಣ ಪರಿಪೂರ್ಣ**
**ಲೋಕ ವಂದಿತ ಶ್ರೀಮಚ್ಚರಣ ॥1॥**

**ಸುಜ್ಞಾನಮೂರ್ತಿ ಗುರುಸರ್ವೋತ್ತಮ**
**ಅದ್ವೈತೋದ್ಧಾರಕ ಜಿತಕಾಮ ॥2॥**

**ಶರಣಾಗತ ವತ್ಸಲ ಮಾಯಾಹರ**
**ಕರುಣಾಮಯ ಭವಭಯಹರ ಶ್ರೀಕರ ॥3॥**

✍ ಶುಭ ಗಾಯತ್ರಿ

ನಮ್ಮವರು

# ಅಟ್ಟೂರು ರಾಮಶರ್ಮ



ಸಮುದಾಯದ ಹಿರಿಯ ಅಟ್ಟೂರು ವೆಂಕಟಗಿರಿಯಪ್ಪ ಹಾಗೂ ಸುಬ್ಬಮ್ಮರ ಪುತ್ರ ಶ್ರೀ ರಾಮಶರ್ಮ ಅಟ್ಟೂರು ಗ್ರಾಮದಲ್ಲಿ 1904ರಲ್ಲಿ ಜನಿಸಿದರು. ಶ್ರೀಯುತರದು ತುಂಬು ಕುಟುಂಬ.

ನಮ್ಮ ತಂದೆಯವರಾದ ಶ್ರೀ ರಾಮಶರ್ಮ 16ನೇ ವಯಸ್ಸಿನಲ್ಲೇ ಬೆಂಗಳೂರಿಗೆ ಬಂದರು. ಬಡತನದಿಂದ ಸಂಸಾರವನ್ನು ಕರೆಸಿಕೊಳ್ಳಲಾಗದೆ ಎಷ್ಟೋ ದಿನ ಉಪವಾಸವಿದ್ದುದುಂಟು. ಕುಟುಂಬದ ಜವಾಬ್ದಾರಿ ಹೊತ್ತ ತಂದೆಯವರಿಗೆ ಮನೆಯಲ್ಲಿ ಒಬ್ಬನಾದರೂ ಓದುವ ಹಂಬಲ. ಹಣಕಾಸಿನ ವಹಿವಾಟು ನಡೆಸುತ್ತಿದ್ದ ಖಾಸಗಿ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಇದ್ದು ಒಬ್ಬ ತಮ್ಮನಿಗೆ ಉನ್ನತ ಶಿಕ್ಷಣ ಕೊಡಿಸಿದರು. ಅವರ ಅಣ್ಣ ತಮ್ಮಂದಿರಲ್ಲಿ ಅನ್ಯೋನ್ಯತೆ ಬಹಳ.

ಆಗ ಇನ್ನೂ ಬೆಂಗಳೂರಿನಲ್ಲಿ 'ಪ್ಲೇಗ್ ಮಾರಿ' ರೋಗ ಕಡಿಮೆ ಆಗಿರಲಿಲ್ಲ. ಅದನ್ನು ನೋಡಿ ಬಹಳ ನೊಂದರು. ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತಿತ್ತು. ಅದೆಲ್ಲವನ್ನು ಲೆಕ್ಕಿಸದೆ ಸಮಾಜ ಸೇವೆಗೆ ನಿಸ್ವಾರ್ಥವಾಗಿ ತಮ್ಮ ಆರೋಗ್ಯವನ್ನು ಪಕ್ಕಕ್ಕೆ ತಳ್ಳಿ ತಾವು ಅವರ ಸ್ನೇಹಿತರು ಸೇರಿ ಮೃತ ದೇಹಗಳ ದಹನ ಸಂಸ್ಕಾರವನ್ನು ಮಾಡುತ್ತಿದ್ದುದು ಮತ್ತು ಹಲವು ಬಾರಿ ಜಟಕಾ ಸಾಹೇಬ್ ಜೊತೆ ಒಬ್ಬರೇ ದಹನ ಮಾಡಿ ಮನೆಗೆ ಬರುತ್ತಿದ್ದರು.

1948ನೇ ಇಸವಿಯಲ್ಲಿ ಹಿಂದೂ ಮುಸ್ಲಿಂ ಗಲಾಟೆಯಲ್ಲಿ ಒಬ್ಬ ಮುಸ್ಲಿಂ ಸ್ನೇಹಿತನ ಜೀವ ಉಳಿಸಲು ಹೋಗಿ ಬಾಕುವಿನ ಇರಿತದಿಂದ ಗಾಯಗೊಂಡಿದ್ದರು. ಅವರು ಮನುಷ್ಯತ್ವಕ್ಕೆ ಬಹಳ ಮಹತ್ವ ಕೊಡುತ್ತಿದ್ದರು.

ನಮ್ಮ ತಂದೆಯವರಿಗೆ ವಿದ್ಯಾರ್ಥಿಗಳೆಂದರೆ ಅಪಾರ ಪ್ರೇಮ. ಅವರೇ ನಮ್ಮ ದೇಶದ ಮುಂದಿನ ಪ್ರಜೆಗಳು ಎಂಬ ಸಿದ್ಧಾಂತ ಬೆಳೆಸಿಕೊಂಡು ಬಂದವರು. ತಮ್ಮ ಮನೆಯಲ್ಲೇ ಆಶ್ರಯ, ಆಹಾರ ಕೊಟ್ಟು ಇರಿಸಿಕೊಳ್ಳುತ್ತಿದ್ದರು. ನಮ್ಮ ಹಲವಾರು ಸ್ನೇಹಿತರು ನಮ್ಮ ಮನೆಯಲ್ಲೇ ವಿದ್ಯಾಭ್ಯಾಸ ಮುಂದುವರೆಸಿದ್ದರು. ಅಷ್ಟೇ ಅಲ್ಲ ಆಂಧ್ರದಿಂದ ಹಲವಾರು ವಿದ್ಯಾರ್ಥಿಗಳು ವಲಸೆ ಬಂದಾಗ ಅವರಿಗೆ ವಾರದ ಊಟ ಹಾಕುತ್ತಿದ್ದರು. ಯಾರಾದರೂ ಮನೆಗೆ ಬಂದರೆ ಊಟವಿಲ್ಲದೆ ಕಳುಹಿಸುತ್ತಿರಲಿಲ್ಲ. ನಮ್ಮ ತಾಯಿಯವರನ್ನು ತಿಳಿದವರು ಗೌರವದಿಂದ ಅನ್ನಪೂರ್ಣಮ್ಮ ಎಂದು ಕೂಡ ಕರೆಯುತ್ತಿದ್ದರು.

ನಮ್ಮ ತಂದೆಯವರು ಯಾರಿಂದಲೂ ಪುನರಾಪೇಕ್ಷೆ ಪಟ್ಟವರಲ್ಲ. ಮಕ್ಕಳನ್ನು 18 ವಯಸ್ಸಿನವರಾದ ಮೇಲೆ ಸ್ನೇಹಿತರನ್ನಾಗಿ ಭಾವಿಸುತ್ತಿದ್ದರು. ಸ್ನಾನ, ಸಂಧ್ಯಾವಂದನೆ, ದೇವತಾರ್ಚನೆ ಇಲ್ಲದೆ ಮನೆಯಿಂದ ಆಚೆ ಹೊರಟವರಲ್ಲ. ಕರ್ಮಯೋಗಿಯಾಗಿ ಜೀವನ ನಡೆಸಿದರು. ಕೊನೆಯುಸಿರು ಇರುವವರೆಗೂ ತಾನು ಏನನ್ನು ಜೊತೆಯಲ್ಲಿ ತರಲಿಲ್ಲ ಮತ್ತು ತೆಗೆದುಕೊಂಡು ಹೋಗುವುದಿಲ್ಲ ಎಂದು ಭೋದಿಸುತ್ತಿದ್ದರು. ಇಂಥವರ ಮಕ್ಕಳಾಗಿ ಹುಟ್ಟಿದ್ದು ನಮ್ಮ ಭಾಗ್ಯ. ಅವರ ಜೀವನ ಸ್ಫೂರ್ತಿದಾಯಕವಾಗಲಿ ಎಂದು ಆಶಯ.

ಅವರ ಹಾದಿಯಲ್ಲೇ ನಮ್ಮ ಕುಟುಂಬವು ನಡೆಯುತ್ತಿದ್ದು ನಮ್ಮ ಸಂಘವು ಅತ್ಯುತ್ತಮ ಕೆಲಸ ನಿರ್ವಹಿಸುತ್ತಿರುವುದರಿಂದ ನಮ್ಮ ಕುಟುಂಬದ ಸದಸ್ಯರೆಲ್ಲರೂ ಸೇರಿ 50,000 ರೂಪಾಯಿಗಳನ್ನು ಮನಃಪೂರ್ವಕವಾಗಿ ನೀಡುತ್ತಿದ್ದೇವೆ.



✍ ಅಟ್ಟೂರು ರಾಮಕೃಷ್ಣ ಶರ್ಮಾ

# ವಿದ್ಯಾರ್ಥಿಗಳಿಗೆ ಕಿವಿಮಾತು

ಇಂದಿನ ಶಿಕ್ಷಣ ಎಷ್ಟು ಗೋಜಲಾಗಿದೆಯೆಂದರೆ ಯಾವ ಶಿಕ್ಷಣ ತಜ್ಞನೂ ಇದಕ್ಕೆ ಪರಿಹಾರ ಹೇಳಲಾಗುವುದಿಲ್ಲ. ಇದೀಗ ಪಿ.ಯು.ಸಿ. ರಿಸಲ್ಟ್ ಬಂದಿದ್ದು ವಿದ್ಯಾರ್ಥಿಗಳು ಒಳ್ಳೇ ಅಂಕಗಳನ್ನು ತೆಗೆದು ಒಳ್ಳೆಯ ಪರ್ಸೆಂಟೇಜ್ ತೆಗೆದಿದ್ದಾರೆ. ಇದು ಅತ್ಯಂತ ಹೆಮ್ಮೆಯ ವಿಷಯ.

ಏಕೆಂದರೆ ಈ ಸಲ ರಸಾಯನಶಾಸ್ತ್ರ ಪ್ರಶ್ನೆ ಪತ್ರಿಕೆಗಳು ಲೀಕ್ ಆಗಿ ವಿದ್ಯಾರ್ಥಿಗಳು ಮೂರು ಬಾರಿ ಪರೀಕ್ಷೆ ಬರೆದಿದ್ದಾರೆ. ಅದಕ್ಕೆ ಅವರ ಸಹನೆಗೆ ನಾವು ಭೇಷ್ ಎನ್ನಲೇಬೇಕು. ನಾನೂ ಸಹ ಕೆಲವು ವರ್ಷಗಳಿಂದ ಶಾಲಾ ಮಕ್ಕಳಿಗೆ ಪಾಠ ಮಾಡುತ್ತಾ ಅವರ ಸಹವಾಸದಲ್ಲಿಯೇ ಕಾಲ ಕಳೆದಿದ್ದೇನೆ. ಆದ್ದರಿಂದ ಮಕ್ಕಳು ಎದುರಿಸುವ ಸಮಸ್ಯೆ ಸವಾಲುಗಳಿಗೆ ಕೆಲವು ಉಪಾಯ ಸೂಚಿಸಿದ್ದೇನೆ.

ಸಮಾಜದಲ್ಲಿ ಸುಶಿಕ್ಷಿತರೆನಿಸಿಕೊಳ್ಳಬೇಕಾದರೆ ನಮ್ಮಲ್ಲಿನ ಜೀವನ ಮೌಲ್ಯಗಳು ಕ್ರಿಯಾಶೀಲವಾಗಿರಬೇಕು. ಸತ್ಯ, ದಯೆ, ಕ್ಷಮಾಗುಣ, ಅಹಿಂಸೆ, ಉದಾರತೆ, ಪರೋಪಕಾರ, ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ಆತ್ಮೀಯತೆ, ಅನುಕಂಪ ಎಲ್ಲವೂ ಇರಬೇಕು. ಸಮಯದ ಮತ್ತು ಪರಿಸರದ ಪರಿಪಾಲನೆಯ ಪರಿಜ್ಞಾನವಿರಬೇಕು. ಜನ್ಮ ಭೂಮಿಯನ್ನು ಕುರಿತ ಸ್ವಾಭಿಮಾನ, ಜವಾಬ್ದಾರಿ ಇರಲೇಬೇಕು. ಇದೆಲ್ಲಕ್ಕೂ ಸತತ ಪರಿಶ್ರಮ, ಅಭ್ಯಾಸದಿಂದ ಮಾತ್ರ ಸಾಧ್ಯವಾಗುವುದು. ಶಿಕ್ಷಣದಿಂದ ನಮ್ಮ ಸಂಪೂರ್ಣ ಸಮಗ್ರ ವ್ಯಕ್ತಿತ್ವ ವಿಕಾಸ ವಾಗುವುದು. ಇದಕ್ಕಾಗಿ ತಂದೆ ತಾಯಿ, ಹಿರಿಯರು, ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು ಮಕ್ಕಳ ಮನವನ್ನು ಸಂಸ್ಕರಿಸಿ ಹದಗೊಳಿಸಬೇಕು.

ಅನಕ್ಷರತೆಯಿಂದ ದೇಶ ಪ್ರಗತಿಯಾಗುವುದಿಲ್ಲ. ಅನಕ್ಷರತೆಯಿಂದ ದೇಶದಲ್ಲಿ ಸರಿಯಾದ ಸರಕಾರ ಚುನಾಯಿಸಲು ಆಗಲಾರದು. ಅಕ್ಷರ ಜ್ಞಾನವಿಲ್ಲದಿದ್ದರೆ ಉದ್ಯೋಗ ಪ್ರಗತಿ, ಸ್ವಾಸ್ಥ್ಯ, ಸ್ವಚ್ಛತೆ, ಶಿಶು ಸಂರಕ್ಷಣೆ, ಯಾವುದೂ ಸಾಧ್ಯವಿಲ್ಲ. ಮೊದಲು ಅನಕ್ಷರತೆ ನಿವಾರಣೆಯಾಗಬೇಕು.

ವಿದ್ಯಾರ್ಥಿಗಳಲ್ಲಿ ಮೊಟ್ಟ ಮೊದಲು ಸಮಯ ಪ್ರಜ್ಞೆ ಇರಬೇಕು ಮತ್ತು ಅಧ್ಯಯನ ಮಾಡಲು ದೈನಂದಿನ ಯೋಜನೆಯ ವೇಳಾಪಟ್ಟಿ ಬರೆದು ಓದುವ ಕೋಣೆಯಲ್ಲಿ ಗೋಡೆಗೆ ಅಂಟಿಸಿಕೊಳ್ಳಿ. ಗೃಹಪಾಠದಲ್ಲಿ ಯಾವ ವಿಷಯ, ಯಾವ ಸಮಯಕ್ಕೆ ಓದಬೇಕು, ಶಾಲೆಯ ಪಾಠಗಳ ವಿವರ ಎಲ್ಲ ನಿಗದಿತ ಸಮಯಕ್ಕೆ ಸಿಗುವಂತೆ ವೇಳಾಪಟ್ಟಿ ಮಾಡಿಟ್ಟುಕೊಳ್ಳಿ. ನಿರ್ದಿಷ್ಟ ಸಮಯದಲ್ಲಿ ಓದುವ ಯೋಜನೆ ಸಿದ್ಧಪಡಿಸಿಕೊಳ್ಳಿ. ನೆನಪಿಡಬೇಕಾದ ವಿಷಯದ ಟಿಪ್ಪಣಿ ಮಾಡಿಕೊಳ್ಳಿ. ಮೂರು ನಾಲ್ಕು ಜನ ಸ್ನೇಹಿತರು ಸೇರಿಕೊಂಡು ಪ್ರಶ್ನಾವಳಿಯನ್ನು ತಯಾರಿಸಿ ದಿನಕ್ಕೆ 50 ಪ್ರಶ್ನೆಗಳಂತೆ ಅಭ್ಯಾಸ ಮಾಡುತ್ತಾ ಬನ್ನಿ. ಕಂಠಪಾಠ ಮಾಡಬೇಕಾದ ಭಾಗಗಳು, ಕೆಮಿಸ್ಟ್ರಿ ಸೂತ್ರಗಳು, ಸಂಸ್ಕೃತ ಶ್ಲೋಕ, ಇತಿಹಾಸದ ಘಟನೆ ಎಲ್ಲ ದಪ್ಪ ಅಕ್ಷರದಲ್ಲಿ ಸ್ಕೆಚ್ ಪೆನ್ನಿನಿಂದ ಬರೆದು ಗೋಡೆಗೆ ಅಂಟಿಸಿಕೊಳ್ಳಿ. ಶಾಲೆಗಳಲ್ಲಿ ಆಟದ ಮುಖಾಂತರ ಲೆಕ್ಕದ ಮತ್ತು ಭೂಗೋಳದ ಸಾಮಾಜಿಕ ಜ್ಞಾನ, ದೇಶ, ಭಾಷೆ, ರಾಜ್ಯ, ರಾಜಧಾನಿ ಎಲ್ಲ ಕಲಿಸಬಹುದು. ತುಂಬಾ ಜಾಣ ಮಕ್ಕಳಿಗೆ ಇವು ಅವರ ರಚನಾತ್ಮಕ ಬುದ್ಧಿಗೆ ಪ್ರೇರಣೆ ನೀಡಬಹುದು. ಅದು ಅವರಿಗೆ ಮನರಂಜನೆಯೂ ಆಗುತ್ತದೆ.

ನೆನಪಿನ ಶಕ್ತಿ ಸುಧಾರಿಸಲು ಜ್ಞಾಪಕ ಶಕ್ತಿ ಆಟಗಳನ್ನು ಆಡಿಸಬೇಕು. ಆಗಾಗ್ಗೆ ಓದಿದ್ದನ್ನು ಮನನ, ಪುನರ್‌ಮನನ ಮಾಡುವುದರಿಂದ ನೆನಪಿನಲ್ಲಿ ಇಟ್ಟುಕೊಳ್ಳಬಹುದು. ಒಂದೇ ಸಮನೆ ಓದದೆ ಮಧ್ಯೆ ವಿರಾಮ ಕೊಡುವು ದರಿಂದ ಓದಿದ ವಿಷಯ ಸ್ಥಿರವಾಗುತ್ತದೆ. ನೆನಪಿನ ಶಕ್ತಿ ದೃಢವಾಗಲು, ಸಮತೋಲನ ಆಹಾರ, ನಿಯಮಿತ ಸಮಯದಲ್ಲಿ ಸೇವಿಸಿ. ಯೋಗಾಭ್ಯಾಸ, ಪ್ರಾಣಾಯಾಮ ಕೂಡ ಇದಕ್ಕೆ ಸಹಾಯವಾಗಬಹುದು. ಪರೀಕ್ಷೆ ಸಮಯದಲ್ಲಿ ಒತ್ತಡ ಹೆಚ್ಚಾಗದಂತೆ ಆಯಾ ದಿನದ ಪಾಠ ಆ ದಿನವೇ ಓದಿ ಮನನ ಮಾಡಿಕೊಳ್ಳಿ. ಮಿತ್ರರಿಗೆ ಜಾಸ್ತಿ ಫೋನ್ ಮಾಡಬೇಡಿ. ಅವರಿಂದ ಸಮಯ ವ್ಯರ್ಥವಾಗುತ್ತದೆ. ಏಕೆಂದರೆ ಪರೀಕ್ಷೆ ಸಮಯದಲ್ಲಿ ಪ್ರತಿಯೊಂದು ಕ್ಷಣವೂ ಅಮೂಲ್ಯವೆನ್ನುವುದನ್ನು ಮರೆಯದಿರಿ. ಪರೀಕ್ಷೆಗೆ ಮರೆಯದೆ ಪ್ರವೇಶ ಪತ್ರವನ್ನು ತೆಗೆದುಕೊಂಡು ಹೋಗಿ.

ಪರೀಕ್ಷಾ ಕೊಠಡಿಗೆ ಹೋದ ತಕ್ಷಣ ಪ್ರವೇಶ ಪತ್ರವನ್ನು ಬರೆಯುವ ಸಲಕರಣೆಗಳನ್ನು ಹೊರಗೆ ತೆಗೆದಿಟ್ಟುಕೊಂಡು, ಉತ್ತರ ಪತ್ರಿಕೆಯಲ್ಲಿ ಮರೆಯದೆ ಪರೀಕ್ಷಾ ಕ್ರಮಾಂಕ, ದಿನಾಂಕ ಹಾಗೂ ವಿಷಯ ಇತ್ಯಾದಿಗಳನ್ನು ಸ್ಪಷ್ಟವಾಗಿ ಬರೆಯಿರಿ. ಪ್ರತಿ ಉತ್ತರ ಬರೆದ ಮೇಲೆ 4–5 ಸಾಲುಗಳನ್ನು ಬಿಟ್ಟು ಮುಂದಿನ ಉತ್ತರ ಬರೆಯಲು ಪ್ರಾರಂಭಿಸಿ. ಅಡಿಷಿನಲ್ ಶೀಟ್ ಅಥವಾ ನಕಾಶೆಗಳಿದ್ದರೆ ಅದರ ಮೇಲೆ ಕ್ರಮಾಂಕ ಬರೆದೇ ಉತ್ತರ ಬರೆಯಲು ಪ್ರಾರಂಭಿಸಿ. ಎಲ್ಲ ಉತ್ತರಗಳು ಬರೆದು ಮುಗಿಸಿದ ಮೇಲೆ ತ್ವರಿತಗತಿಯಲ್ಲಿ ಓದಿ ತಿದ್ದುಪಡಿ ಮಾಡಿರಿ. ಪರೀಕ್ಷೆಯ ದಿನ ಮನೆಯಲ್ಲಿ ಯಾವ ಕಾರಣಕ್ಕೂ ಮನಸ್ಸು ಕೆಡಿಸಿಕೊಳ್ಳದೆ, ಶಾಂತ ಚಿತ್ತದಿಂದ ಪರೀಕ್ಷೆಗೆ ಬನ್ನಿ. ಆತಂಕ ಬೇಡ.

ನಿಮಗೆ ಬರುವುದನ್ನು ಆತ್ಮವಿಶ್ವಾಸದಿಂದ ಸರಿಯಾಗಿ ಬರೆದು ಒಳ್ಳೆಯ ಅಂಕಗಳನ್ನು ಗಳಿಸಿ. ನೀವು ಓದಿದ ಶಾಲೆ, ಕಾಲೇಜಿಗೆ ಒಳ್ಳೆಯ ಹೆಸರನ್ನು ತನ್ನಿ. ನಿಮ್ಮ ರಜೆಯ ಅವಧಿಯನ್ನು ಕ್ರಿಯಾತ್ಮಕವಾಗಿಯೂ, ಸೃಜನಾತ್ಮಕ ವಾಗಿಯೂ ಹಾಗೂ ರಚನಾತ್ಮಕವಾಗಿಯೂ ಕಳೆಯಿರಿ.

ಒಳ್ಳೆಯ ಪುಸ್ತಕಗಳನ್ನು ಓದಿ ಜ್ಞಾನ ವೃದ್ಧಿ ಮಾಡಿಕೊಳ್ಳಿ. ಕತೆ, ಕವನ, ಕಾದಂಬರಿ, ನಿಬಂಧ ಇತ್ಯಾದಿ ಬರೆದು ಯಾವುದಾದರೂ ಪತ್ರಿಕೆಗೆ ಕಳಿಸಿ, ಐತಿಹಾಸಿಕ ಸ್ಥಳಗಳಿಗೆ ಪ್ರವಾಸ ಹೋಗಿಬನ್ನಿ. ಸಂಗೀತ, ನೃತ್ಯಕಲೆ, ಚಿತ್ರಕಲೆ, ಕಂಪ್ಯೂಟರ್, ಈಜು ಕಲಿಯುವುದು, ನಿಮಗೆ ಇಷ್ಟವಾದ ಆಟದಲ್ಲಿ ಪ್ರಾವೀಣ್ಯತೆ ಪಡೆಯುವುದು. ಇತರ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಈ ರಜಾ ದಿನ ಸರಿಯಾದ ಸಮಯ. ನಿಮ್ಮ ರಜಾದಿನ ಉಪಯುಕ್ತವಾಗಲಿ ಎಂದು ಹಾರೈಸುತ್ತೇನೆ. ನನ್ನ ಲೇಖನ ನಿಮಗೆ ಸ್ವಲ್ಪವಾದರೂ ಮಾರ್ಗದರ್ಶನ ನೀಡಿದರೆ ನನಗೆ ಅದು ಸಂತಸದ ವಿಚಾರ, ಒಳ್ಳೆಯದಾಗಲಿ.

ಎಲ್ಲಾ ಮಕ್ಕಳೂ ಶಿಕ್ಷಣ ಸೌಲಭ್ಯ ಪಡೆದು, ದೇಶದ ಉನ್ನತಿಗೆ ಕೈ ಜೋಡಿಸಲಿ. ನನ್ನ ಈ ಕಿವಿ ಮಾತು ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಾಸಕ್ಕೆ ಸಹಾಯವಾಗಬಹುದು.



✍ **ಗಾಯತ್ರಿ ಶೇಷಾಚಲ**
**25630483**

## ರಂಗೋಲಿ



ಎಂ.ಎಸ್. ವಿಜಯಲಕ್ಷ್ಮಿ

# ಜ್ಞಾನದ ವಾಣಿ

**ಡಿ.ವಿ.ಜಿ.**

ಬರಿಯೋದು, ಬರಿದಾದ ಬರಿ ಬುದ್ಧಿ ದೊರಕಿಸದು
ಪರತತ್ತ್ವವನು ಬೇಕು ಬೇರೆ ಕಣ್ಣದಕೆ
ಚಿರದ ಮಮತಾವೇಶ್ಮಿತನ ಪೊರೆಯ ಪರಿದಂದು
ಅರಳ್ವದರಿವಿನ ಕಣ್ಣು– ಮಂಕುತಿಮ್ಮ ॥

**ಸರ್ವಜ್ಞ**

ಸಣ್ಣನೆಯ ಮರಳೊಳಗೆ । ನುಣ್ಣನೆಯ ಶಿಲೆಯೊಳಗೆ
ಬಣ್ಣಿಸಿ ಬರೆವ ಪುಟದೊಳಗೆ ಇರುವಾತ
ತನ್ನೊಳಗೆ ಇರನೆ ಸರ್ವಜ್ಞ॥

**ರಾಷ್ಟ್ರಕವಿ ಕುವೆಂಪು**

ದೇವರ ಧ್ಯಾನ, ಪೂಜೆ, ಪ್ರಣಾಮ ಹೇಗೆ?
ದೇಹವಿದು ನೀನಿರುವ ಗುಡಿಯೆಂದು ತಿಳಿದು
ಗುಡಿಸುವೆನು ದಿನದಿನವು ದೇವ ದೇವ ।
ಘಂಟೆಗಳ ನಾ ಹೊಡೆಯೆ, ಶಂಖವನು ನಾನೂದೆ ।
ಮಂಗಳಾರತಿಯ ನಾ ಬೆಳಗಲರಿಯೇ ।
ನಿನ್ನ ಸಂಗವತೊರೆಯೆ ನಿನ್ನನೆಂದೂ ಮರೆಯೆ
ನಿನ್ನವನು ನಾನು ಅಲ್ಲವೇನೊ ಹರಿಯೇ ॥
ಎಂತಹ ಹೃದಯಂಗಮ ಪ್ರಾರ್ಥನೆ

**ಸಂತ ಕಬೀರ**

ರಾಗಿಯನ್ನು ಬೀಸುತ್ತಿದ್ದ ಮುದುಕಿಯನ್ನು ಕಂಡು ಕಬೀರರು ಏನೋ ಬೇಸರದಿ ಅತ್ತರು.

**ಅಜ್ಜಿ :** ಯಾಕಪ್ಪ ಅಳುವೆ ?

**ಕಬೀರ :** ಗರಗರನೆ ತಿರುಗುವ ಇದು ಭವಚಕ್ರ. ಧಾನ್ಯಗಳು ಜೀವಿಯಂತೆ ಇದರ ಮಧ್ಯೆ ಸಿಕ್ಕಿ ನುಚ್ಚು ನೂರಾಗುತ್ತಿದೆ. ನೀನೇ ಮಹಾಮಾಯೆ ಎಂದು ಎನ್ನಿಸಿತು ಎಂದರು. ನಮ್ಮ ಪಾಡು ಕೂಡ ಅಂತೆಯೇ ಎಂದು ದುಃಖ ಎಂದರು.

**ಅಜ್ಜಿ :** 'ಬೀಸುವ ಕಲ್ಲಿನ ಮಧ್ಯೆ 'ಮೇಟಿ' ಎಂಬ ಗುಟವಿದೆ. ಅದು ತಿರುಗುವುದಿಲ್ಲ. ಅದನ್ನು ಆಶ್ರಯಿಸಿದ ಧಾನ್ಯ ಹಿಟ್ಟಾಗದು. ಹಾಗೇ ಇರುತ್ತದೆ. ನೀನು ಅಂತೆಯೇ ಜಗದಾಧಾರ, ದೈವವನ್ನು ಆಶ್ರಯಿಸು. ಭವಚಕ್ರದಿ ಪಾರಾಗುವ ಉಪಾಯ' ಎಂದಳು.

ಓರ್ವ ಗೃಹಿಣಿ ಜರಡಿ, ಮೊರ ಹಿಡಿದು ಕಾರ್ಯಮಗ್ನಳಾಗಿದ್ದಳು. ಸಂತನೊಬ್ಬ ನಿಂತು ನೋಡುತ್ತಿದ್ದ. 'ತಾಯಿ, ನಾವು ಸಂಸಾರದಿ ಮೊರ ಆಗಬೇಕು. ಜರಡಿ ಆಗಬಾರದೆಂದು ಇದರ ಅರ್ಥವೇನೆಂದಳು? ಗೃಹಿಣಿ. ತಾಯಿ ಜರಡಿಯು ಒಳ್ಳೆಯ ಪದಾರ್ಥವನ್ನೆಲ್ಲಾ ಕೆಳಗೆ ಬಿಟ್ಟು, ಹುಳ, ಗೂಡು, ಜರಡಿ ಮೇಲೆ ನಿಲ್ಲುವುದು. ಮೊರವಾದರೆ ಜಳ್ಳು, ಹುಳ ಎಲ್ಲ ತೂರಿ ಗಟ್ಟಿ ಕಾಳು ಇಡಿದಿರುತ್ತದೆ. ನಾವು ಜೀವನದಿ ಅಂತೆಯೇ ಕೆಟ್ಟದ್ದು ಬಿಟ್ಟು ಒಳ್ಳೆಯದನ್ನು ಉಳಿಸಿಕೊಳ್ಳಬೇಕು. ಜೀವನ ಸಾರ್ಥಕಪಡಿಸಿಕೊಳ್ಳಬೇಕು. ಅದಕ್ಕೆ ಬೇಕು ಜ್ಞಾನದ ಕಣ್ಣು. ಅವಧೂತ ದತ್ತಾತ್ರೇಯರು ಜಗತ್ತಿನ ದೃಶ್ಯದಿ ಪಾಠ ಕಲಿತರು. ಜಗತ್ತಿಗೆ ಸದ್ಗುರುಗಳಾದರು. ಸಣ್ಣ ಸಣ್ಣ ವಿಷಯದಲ್ಲಿ ಗಹನ ತತ್ವ ಗ್ರಹಿಸಿ ಜ್ಞಾನಿಗಳಾಗಿ ಮಾರ್ಗದರ್ಶಕರಾದರು. ಅಂತೆಯೇ ಜನ ಸಾಮಾನ್ಯರ ದೃಷ್ಟಿ ಬದಲಾಗಲಿ ಎಂದು ಆಶಿಸೋಣ, ಪ್ರಾರ್ಥಿಸೋಣ.

✍ **ಭ್ರಮರಾ ಗೋಪಿನಾಥ್**

## ಓದುಗರ ಪತ್ರಗಳು



**ಸ್ಪಂದನೆ–**

ಮಾನ್ಯರೇ ನಮಸ್ಕಾರಗಳು.

ಜನವರಿ–ಮಾರ್ಚ್ 2016ರ ಪತ್ರಿಕೆ ಸಕಾಲಕ್ಕೆ ತಲುಪಿದೆ. ವಂದನೆಗಳು. ಪತ್ರಿಕೆ ಎಂದಿನಂತೆ ಸುಂದರ ವಿಚಾರಪೂರ್ಣ, ಓದಿಸಿಕೊಳ್ಳುವ ಗುಣವಿದೆ. ಅರ್ಪಣೆ, ನಾಗಾರಾಧನೆ ಕುರಿತಾದ ಲೇಖನ, ಚಿತ್ರಗಳು, ವಿ.ಎಸ್. ಮಣಿಯವರ ಬರಹ ಶಿವನ ಕುರಿತು ಎಲ್ಲಕ್ಕಿಂತ ಸೌಮ್ಯ ಯೋಗೀಶ್ ಅವರ ಚಿತ್ರಗಳು ಸಂಗ್ರಹಯೋಗ್ಯ. ನಮ್ಮವರು ಡಿ.ವಿ.ಜಿ. ಕುರಿತಾದ ಲೇಖನ ಭರತ ಕುರಿತ ಬರಹ, ಮಿತ್ರತ್ವ ಕುರಿತ, ವಾರ್ತಾ ಚಿತ್ರಗಳಲ್ಲಿ ಗುರುಗಳ ಪಕ್ಕದಲ್ಲಿ ಕುಳಿತವರ ಹೆಸರು ತಿಳಿದಿಲ್ಲ. ಹಾಗೆಯೇ ಮಂಗಳಾ ಕೃಷ್ಣಮೂರ್ತಿಯವರೊಂದಿಗೆ ಇರುವ ಸನ್ಮಾನ್ಯರ ಹೆಸರು ಹಾಕಬಹುದಿತ್ತು.

**ಎಸ್ಸೆಸ್ಕೆ**

'ಬೃಹಚ್ಚರಣ' ಪತ್ರಿಕೆಯ ಹೆಸರೇ ನನ್ನನ್ನು ತುಂಬಾ ಆಕರ್ಷಿಸಿತು. ಪತ್ರಿಕೆಗಳ ಲೇಖನಗಳನ್ನು ಓದುವಂತೆ ಮಾಡಿತು. ಎಲ್ಲಾ ಲೇಖಕರೂ ಚೆನ್ನಾಗಿ ಬರೆದಿದ್ದಾರೆ. ಓದಿ ಖುಷಿ ಎನಿಸಿತು. ನಿಮ್ಮ ಸಮುದಾಯದವರು ಒಗ್ಗಟ್ಟಾಗಿ ಈ ಪತ್ರಿಕೆಯನ್ನು ಹೊರತಂದಿರುವುದು ಶ್ಲಾಘನೀಯ.

ನಾಗಾರಾಧನೆಯ ಪೂಜೆ, ಸಡಗರ, ಸಂಭ್ರಮ ಕ್ಷೇತ್ರದ ವೈವಿಧ್ಯತೆಯ ಪರಿಚಯ ಮಾಡಿರುವುದು ಓದಿ ಮನಸ್ಸಿಗೆ ಬಹು ಹಿತವೆನಿಸಿತು. ಓದಿರುವುದು ಎರಡು ಪತ್ರಿಕೆಗಳು ಮಾತ್ರ. ಎರಡರಲ್ಲೂ ಲೇಖನಗಳು ಸೊಗಸಾಗಿವೆ ವಂದನೆಗಳು.

'ಬೃಹಚ್ಚರಣ' ಈ ಹೆಸರೇ ಹೇಳುವಂತೆ ಈ ಪತ್ರಿಕೆ ತ್ರಿವಿಕ್ರಮನಂತೆ ಬೆಳೆಯಲಿ ಎಂದು ಹಾರೈಸುವೆವು. ಶುಭವಾಗಲಿ

**ಶಾಂತಮ್ಮ,** ಶ್ರೀನಿವಾಸನಗರ

Book-Post

To,

_______________

_______________

_______________

*If un Delivered please return to :*
*President*
**'Brihacharana Sangha'** No. 8, 3rd Cross, Annaiyyappa Block, Kumarapark West, Bengaluru-560 020.

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com

**PRASAD & KUMAR**
CHARTERED ACCOUNTANTS

315, 6th Main Road, HAL II Stage, Indiranagar,
Bangalore - 560 038

Partners:
B.N. Govinda Prasad, B.Com, FCA. ISA
Mobile: 9845128229
Email: prasad@bngassociates.co.in

B.N.G. Kumar, B.Com, AICWA, FCA
Mobile: 9980329574
Email: kumar@bngassociates.co.in

## AUDITOR'S REPORT

We have audited the attached **Receipts & Payments Account and Income & Expenditure Account of "MYSORE MANJAPATHUR DRAVIDA BRUHACHARANA SANGHA"** for the year **1st April 2015 to 31st March 2016 and the Balance Sheet as at 31st March 2016 of the said Sangha.** These financial statements are the responsibility of the Board of Management of the Sangha. Our responsibility is to express an opinion on this financial statement based on our audit.

We conducted our audit in accordance with auditing standards generally accepted in India. Those standards require that we plan and perform the audit to obtain reasonable assurance about whether the financial statements are free of material misstatement. An audit includes examining, on a test basis, evidence supporting the amounts and disclosures in the financial statements. An audit also includes assessing the accounting principles used and significant estimates made by the management, as well as evaluating the overall financial statement presentation. We believe that our audit provides a reasonable basis for our opinion.

We report that:

(i) We have obtained all the information and explanations, which to the best of our knowledge and belief were necessary for the purposes of our audit ;

(ii) In our opinion, proper books of account as required by law have been kept by the Sangha so far as appears from our examination of those books ;

(iii) The Receipts & Payments Account, Income & Expenditure Account and the Balance Sheet dealt with by this Report are in agreement with the books of account ;

(iv) In our opinion and to the best of our information and according to the explanations given to us, the said account give a true and fair view in conformity with the accounting principles generally accepted in India of the state of affairs of the Sangha for the period 1st April 2015 to 31st March 2016.

**For Prasad & Kumar, Chartered Accountants (FRN 005837S)**

PRASAD & KUMAR
Bangalore - 38.
Chartered Accountants

**BNG Kumar, Partner (M.No.201338)**

Bangalore
2nd July 2016

## MYSORE MANJAPATHUR DRAVIDA BRUHACHARANA SANGHA

### INCOME & EXPENDITURE ACCOUNT FOR THE PERIOD
### 1ST APRIL 2015 TO 31ST MARCH 2016

| EXPENDITURE | Rs. | INCOME | Rs. |
|---|---|---|---|
| AGM, Pratibha Puruskara & Honouring of Senior Members of the Community (July 2015) | 76,625.00 | Receipts during the period from Members of the Sangha towards : | |
| | | - Membership & Subscriptions | 66,505.00 |
| Nagaradhane Expenses (March 2016) | 87,310.00 | - Nagaradhane | 1,00,100.00 |
| | | - Voluntary Contributions | 32,744.00 |
| Kalyanotsava Expenses (Dec 2015) | 1,15,140.00 | - Kalyanotsava | 1,83,140.00 |
| Cultural Programme Expenses (May 2015) | 19,073.00 | | |
| Magazine Publication & Other Printing Expenses | 81,405.00 | Interest received from Banks : | |
| | | - On Fixed Deposits | 2,81,764.00 |
| Bank Charges | 11.00 | - On Savings Bank A/c | 4,668.00 |
| | | - On TDS Refund | 775.00 |
| Excess of Income over Expenditure | 2,90,132.00 | | |
| | 6,69,696.00 | | 6,69,696.00 |

S Somasundara - President

VS Mani - Secretary

S Sathya Narayana - Treasurer

Bangalore
2nd July 2016

**As per our Report of even date**
**for Prasad & Kumar, Chartered Accountants (FRN 005837S)**

**BNG Kumar, Partner (M.No.201338)**

PRASAD & KUMAR ★ Bangalore - 38. ★ Chartered Accountants

# MYSORE MANJAPATHUR DRAVIDA BRUHACHARANA SANGHA

## BALANCE SHEET AS AT 31ST MARCH 2016

| CAPITAL | Rs. | ASSETS | Rs. |
|---|---|---|---|
| Capital Fund - | | Cash on Hand | 292.25 |
| Opening Balance as on 1-Apr-2015 | 19,42,829.00 | SB A/c in National Co-operative Bank Ltd | 1,20,898.75 |
| Excess of Income over Expenditure for 2015-16 | 2,90,132.00 | Fixed Deposits in National Co-operative Bank Ltd | 29,02,724.00 |
| Closing Balance as on 31-Mar-2016 | 22,32,961.00 | SB A/c in Canara Bank | 4,765.00 |
| | | Fixed Deposits in Canara Bank | 1,63,643.00 |
| Shashwatha Annadhana Fund | 9,00,008.00 | | |
| | | TDS Receiveable (FY 2015-16) | 34,560.00 |
| Vidyanidhi Fund | 78,914.00 | | |
| Building Fund | 15,000.00 | | |
| | 32,26,883.00 | | 32,26,883.00 |

S Somasundara - President

VS Mani - Secretary

S Sathya Narayana - Treasurer

Bangalore
2nd July 2016

As per our Report of even date
for Prasad & Kumar, Chartered Accountants (FRN 005837S)

BNG Kumar, Partner (M.No.201338)

## ಸಂಘದ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ದೇಣಿಗೆ ನೀಡಿರುವ ಸದಸ್ಯರು

ಶ್ರೀಯುತರುಗಳಾದ

| | | |
|---|---|---|
| 1. | ಸೋಮಸುಂದರ್ | 500.00 |
| 2. | ವಿ.ಎಸ್. ಮಣಿ | 500.00 |
| 3. | ಕೆ.ಬಿ.ಎಸ್. ಮಣಿ | 500.00 |
| 4. | ಭರತ್ ಶರ್ಮಾ | 500.00 |
| 5. | ಗಣೇಶ್ ಶ್ರೀಧರ್ | 500.00 |
| 6. | ರೂಪಶ್ರೀ | 500.00 |
| 7. | ಮಂಜುನಾರಾಯಣ | 500.00 |
| 8. | ಶ್ರೀನಿವಾಸ ಎಸ್.ಸಿ. | 500.00 |
| 9. | ಸೂರ್ಯನಾರಾಯಣ ಟಿ.ಪಿ. | 500.00 |
| 10. | ಶಂಕರ ಪ್ರಸಾದ್ | 500.00 |
| 11. | ನಟರಾಜನ್ ಕೆ.ಸಿ. | 500.00 |
| 12. | ಸರಸ್ವತಿ ನಟರಾಜನ್ | 500.00 |
| 13. | ಅನಂತ ಕೆ.ಎಸ್. | 500.00 |
| 14. | ನಾಗೇಶ್ ಟಿ.ಎಸ್. | 500.00 |
| 15. | ಅರುಣ್ ವೆಂಕಟಾಚಲಯ್ಯ | 500.00 |
| 16. | ವೆಂಕಟಗಿರಿಯಪ್ಪ | 500.00 |
| 17. | ಸತ್ಯನಾರಾಯಣ ಎಸ್. | 500.00 |
| 18. | ಸುಬ್ರಮಣ್ಯಂ, ಬೆಂಗಳೂರು | 500.00 |
| 19. | ಶ್ರೀನಿವಾಸ್ ಎಚ್.ಪಿ. | 500.00 |
| 20. | ಪರಮೇಶ್ವರ ಹೆಚ್.ಎಸ್. | 500.00 |
| 21. | ಮಹೇಶ್ ಆರ್.ಎಸ್. | 500.00 |
| 22. | ರವಿಶಂಕರ್ ಆರ್.ಪಿ. | 500.00 |
| 23. | ಮಂಜುನಾಥ್ ಆರ್.ಎನ್. | 500.00 |
| 24. | ಮೋಹನ್ ಎಸ್. | 500.00 |
| 25. | ಈಶ್ವರನ್ | 500.00 |
| 26. | ಛಾಯಾ ಭಗವಾನ್ | 500.00 |
| 27. | ಭಗವಾನ್ ರಾಜಾಪುರ | 500.00 |
| 28. | ಉದಯ ರಾಜಾಪುರ | 500.00 |
| 29. | ಸಂಜಯ ರಾಜಾಪುರ | 500.00 |
| 30. | ಅಜಯ್ ರಾಜಾಪುರ | 500.00 |
| 31. | ಗಣಪತಿ | 500.00 |
| 32. | ಶೇಷಾದ್ರಿ ಬಿ.ವಿ. | 500.00 |
| 33. | ಪದ್ಮ ಬಿ.ವಿ. | 500.00 |
| 34. | ಶುಭ ಗಾಯತ್ರಿ ಎನ್. | 500.00 |
| 35. | ಶಿವಕುಮಾರ್ ಎನ್. | 500.00 |
| 36. | ರಾಜಗೋಪಾಲ್ ಆರ್.ಎಸ್. | 500.00 |
| 37. | ರಾಮಕೃಷ್ಣ ಆರ್.ಎಸ್. | 500.00 |

## 'ವಿದ್ಯಾನಿಧಿ'ಗೆ ದೇಣಿಗೆ ನೀಡಿರುವ ಸದಸ್ಯರು

ಶ್ರೀಯುತರುಗಳಾದ

| | | |
|---|---|---|
| 1. | ಛಾಯಾ ಭಗವಾನ್ | 6,000/– |
| 2. | ರಮೇಶ್ ಆರ್.ಎಸ್. | 5,001/– |
| 3. | ಸರಸ್ವತಿ ಬಿ.ಪಿ. (ಇಂದಿರಮ್ಮ) | 5,000/– |
| 4. | ಅಜಯ್ ರಾಜಾಪುರ | 5,000/– |
| 5. | ಚಿತ್ರಾ ವೆಂಕಟರಮಣಿ | 5,000/– |
| 6. | ಟಿ.ಎನ್. ರವಿಕಿರಣ್ | 5,000/– |
| 7. | ರಾಜಗೋಪಾಲ್ ಆರ್.ಎಸ್. | 2,500/– |
| 8. | ಉಮೇಶ್ ಎಸ್. | 2,000/– |
| 9. | ಮುರಳಿ ಕೆ.ಬಿ. | 2,000/– |
| 10. | ಸುರೇಶ್ ಬಿ.ಇ. | 1,001/– |
| 11. | ರಂಗನಾಥನ್ ಎಂ.ಪಿ.. | 1,001/– |
| 12. | ಪವಮಾನ | 1000/– |
| 13. | ನಾಗರಾಜ್ ಜಿ.ಎಸ್. | 1000/– |
| 14. | ಮೋಹನ್ ಎಸ್. | 1000/– |
| 15. | ಮಂಜುನಾಥ್ ಆರ್.ಎಸ್. | 500/– |

## ಚಿಣ್ಣರ ಅಂಗಳ

### ಬಣ್ಣ ತುಂಬಿ ಅಂದ ನೋಡಿ

ಈ ಚಿತ್ರಕ್ಕೆ ಅಂದವಾಗಿ ಬಣ್ಣತುಂಬಿ ನಮಗೆ ಕಳುಹಿಸಿದಲ್ಲಿ ಉತ್ತಮವಾದ ಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.



